# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038






ಸಂಪುಟ:02 • ಸಂಚಿಕೆ: 56 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 24.08.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 56 • PRGI No:KARKAN/2023/88055 • VIJAYANAGARA • 24.08.2024 • Saturday • Page:04 • Rs:2





## ಮೈಕ್ರೋ ನ್ಯೂಸ್

### ಆ. 28ಕ್ಕೆ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರ ಪ್ರವಾಸ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಆರ್. ಮೇಹರೋಜ್ ಖಾನ್ ಅವರು ಆಗಸ್ಟ್ 28ರಂದು ವಿಜಯನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಗ್ಗೆ 10 ಗಂಟೆಗೆ ವಿಜಯನಗರ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ, 5 ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ಪ್ರಗತಿ ಪರಿಶೀಲನಾ ಸಭೆ ನಡೆಸುವರು. ಹಾಗೂ ಫಲಾನುಭವಿಗಳೊಂದಿಗೆ ಸಂವಾದ ನಡೆಸುವರು. ಬಳಿಕ ಮಧ್ಯಾಹ್ನ 1.30ಕ್ಕೆ ಹೊಸಪೇಟೆಯಿಂದ ನಿರ್ಗಮಿಸಿ ಕೊಪ್ಪಳ ಜಿಲ್ಲೆಗೆ ಪ್ರಯಾಣ ಬೆಳೆಸುವರು ಎಂದು ಹೆಚ್ಚುವರಿ ಆಪ್ತ ಕಾರ್ಯದರ್ಶಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ; ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2024–25 ನೇ ಸಾಲಿನ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರುಪಾತಿಸುವ ಯೋಜನೆಯಡಿ ಅರ್ಹರಿಂದ ಆಹ್ವಾನಿಸಲಾಗಿದೆ.

ಆಸಕ್ತ ಕ್ರೀಡಾಪಟುಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಚೇರಿಯಿಂದ ಅರ್ಜಿ ನಮೂನೆ ಪಡೆದು ಸೆ.20 ರೊಳಗಾಗಿ ಭರ್ತಿಮಾಡಿ ಪೂರಕ ದಾಖಲೆಗಳೊಂದಿಗೆ ಇದೇ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಎನ್.ಎಂ.ಎಂ.ಎಸ್ ಪರೀಕ್ಷೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಟಿಬಿಪಿ ಮುನಿರಾಬಾದ್‌ನಲ್ಲಿರುವ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಿಂದ ಎನ್.ಎಂ.ಎಂ. ಎಸ್ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮಾರ್ಗಸೂಚಿಯಂತೆ ಎನ್.ಎಂ.ಎಂ.ಎಸ್ ಪರೀಕ್ಷೆಯನ್ನು ಡಿಸೆಂಬರ್ 08 ರಂದು ನಡೆಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯಿಂದ ಆಗಸ್ಟ್ 19 ರಿಂದ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿದ್ದು, ಸರ್ಕಾರಿ, ಅನುದಾನಿತ ಮತ್ತು ಸ್ಥಳೀಯ ಸಂಸ್ಥೆ ಶಾಲೆಗಳಲ್ಲಿ 8ನೇ ತರಗತಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಅರ್ಜಿಯು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ವೆಬ್‌ಸೈಟ್ https://kseab.karnataka.gov.in/ ನಲ್ಲಿ ಲಭ್ಯವಿದ್ದು, ಶಾಲಾ ಮುಖ್ಯ ಶಿಕ್ಷಕರು ವಿದ್ಯಾರ್ಥಿಗಳ ಅರ್ಜಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 05 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಕೆ.ಎಸ್. ಕ್ಯು.ಎ.ಎ.ಸಿ ಕಚೇರಿಯ ದೂ: 080–23341615 ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಮುನಿರಾಬಾದ್ ದೂ: 9448999375ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಔಷಧಿ ನೀಡಿ

**ಡಿಸಿ ಎಂ.ಎಸ್.ದಿವಾಕರ ಹೇಳಿಕೆ | ರೋಗಿಗಳಿಗೆ ಔಷಧಿ ಹೊರಗಡೆ ಖರೀದಿಸಲು ಹೇಳಿದವರ ವಿರುದ್ಧ ಕ್ರಮ ನಿಯಮಾನುಸಾರ ಅಗತ್ಯ ಔಷಧಿ ಖರೀದಿಸಿ | 10 ಬೆಡ್ ಐಸಿಯು ಘಟಕ ಶೀಘ್ರ ಸ್ಥಾಪನೆಗೆ ಡಿಹೆಚ್ಒಗೆ ಸೂಚನೆ**







**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೊಸಪೇಟೆ ನಗರದಲ್ಲಿನ ನೂರು ಹಾಸಿಗೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಶುಕ್ರವಾರ ಅನಿರೀಕ್ಷಿತವಾಗಿ ಭೇಟಿ ನೀಡಿ, ಪರಿಶೀಲಿಸಿ ಅವ್ಯವಸ್ಥೆಯನ್ನು ಕಂಡು ಸಿಬ್ಬಂದಿಗಳನ್ನು, ತರಾಟೆಗೆ ತೆಗೆದುಕೊಂಡರು.

ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ನೀಡಲೆಂದು ಆಸ್ಪತ್ರೆಗಳನ್ನು ತೆರೆದಿವೆ. ಅಗತ್ಯ ಔಷಧಿಗಳನ್ನು ರೋಗಿಗಳಿಗೆ ಆಸ್ಪತ್ರೆಯಲ್ಲೆ ಚಿಕಿತ್ಸೆ ಬಳಿಕ ನಿಡಬೇಕು. ಯಾವೊಬ್ಬ ರೋಗಿಗೂ ಹೊರಗಡೆಯ ಔಷಧಿಕ ಖರೀದಿಸಲು ಚೀಟಿ ಬರೆದುಕೊಡುವಂತಿಲ್ಲ. ಬರೆದು ಕೊಟ್ಟರೆ ಅವರ ವಿರುದ್ಧ ಸೂಕ್ರ ಕ್ರಮಜರುಗಿಸಲಾಗುವುದು ಎಂದು ಖಡಕ್ ಸೂಚನೆ ನೀಡಿದರು. ವೈದ್ಯರು ಬರೆದು ಕೊಡುವ ಔಷಧಿಕಗಳ ಪಟ್ಟಿ ಮಾಡಿ ನೇರವಾಗಿ ನಿಯಮಾನುಸಾರ ಖರೀದಿಸಬೇಕು ಎಂದು ಡಿಎಚ್ಒಗೆ ನಿರ್ದೇಶನ ಮಾಡಿದರು.

ಜಿಲ್ಲಾಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದಾಗ ಆಸ್ಪತ್ರೆಯ ಕೌಂಟರ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿರುವುದು ಕಂಡು ಬಂದಿದ್ದು. ಆಸನ ಸೇರಿದಂತೆ ಇನ್ನೀತರ ಮೂಲಭೂತ ಸೌಕರ್ಯಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು ಜನರಿಗೆ ಅನುಕೂಲವಾಗಲು ಕೂಡಲೇ ಹೆಚ್ಚುವರಿ ಕೌಂಟರ್ ವ್ಯವಸ್ಥೆ ಮಾಡಲು ಹಾಗೂ ಆಸ್ಪತ್ರೆಗೆ ಆಗಮಿಸುವ ಸಾರ್ವಜನಿಕರಿಗೆ ಕೂಡಲು ಆಸ್ಪತ್ರೆಯ ಹೊರಾಂಗಣ ಮತ್ತು ಒಳಾಂಗಣದಲ್ಲಿ ಸೂಕ್ತವಾದ ಆಸನದ ವ್ಯವಸ್ಥೆ ಮಾಡಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಎಂದರು. ಕೆಲವು ವಾರ್ಡಗಳಲ್ಲಿ ಕಂಡುಬಂದ ಸಣ್ಣಪುಟ್ಟ ದುರಸ್ಥಿಗಳನ್ನು ತಿಂಗಳೊಳಗೆ ಸರಿಪಡಿಸುವಂತೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಔಷಧಿಗಳ ಲಭ್ಯತೆ ಮತ್ತು ವೈದ್ಯಕೀಯ ಸಲಕರಣೆಗಳ ಬಗ್ಗೆ ವೈದ್ಯಾಧಿಕಾರಿಗಳಿಂದ ಮಾಹಿತಿ ಪಡೆದರು.

**ಡಿಸಿ ದಿಢೀರ್ ಭೇಟಿ ಪರಿಶೀಲನೆ**

ಆಸ್ಪತ್ರೆಗೆ ಅವಶ್ಯವಿರುವ ಎಲ್ಲಾ ಔಷಧಗಳನ್ನು ಹಾಗೂ ಉಪಕರಣಗಳನ್ನು 15 ದಿನಗಳೊಳಗಾಗಿ ನಿಯಮಾನುಸಾರ ಖರೀದಿಸಿ ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವಂತೆ ಸ್ಥಳದಲ್ಲಿ ಹಾಜರಿದ್ದ ಡಿಎಚ್ಒ ಶಂಕರ ನಾಯಕ ಅವರಿಗೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಶೀಘ್ರದಲ್ಲಿ ಹೊರರೋಗಿ ವಿಭಾಗ (ಒಪಿಡಿ)ಯನ್ನು ಆಸ್ಪತ್ರೆ ಕಟ್ಟಡದ ಹೊರಾಂಗಣಕ್ಕೆ ಸ್ಥಳಾಂತರಿಸಿ ಒಳಗಿನ ಜನಸಂದಣಿ ಕಡಿಮೆ ಮಾಡಲು ಜಿಲ್ಲಾಧಿಕಾರಿಗಳು ಸಲಹೆ ಮಾಡಿದರು. ಆಸ್ಪತ್ರೆಯಲ್ಲಿ ಲಭ್ಯವಿರುವ ಬೆಡ್ ಸೇರಿದಂತೆ ಇನ್ನೀತರ ಮಾಹಿತಿಯನ್ನು ಪಡೆದ ಜಿಲ್ಲಾಧಿಕಾರಿಗಳು, 10 ಬೆಡ್‌ಗಳನ್ನೊಳಗೊಂಡ ಐ.ಸಿ.ಯು. ಘಟಕವನ್ನು ಸ್ಥಾಪಿಸಲು ತಿಳಿಸಿದರು.

ಇದೆ ವೇಳೆ ಆಸ್ಪತ್ರೆಯಲ್ಲಿನ ರೋಗಿಗಳೊಂದಿಗೆ ಅಲ್ಲಿನ ಸೌಲಭ್ಯಗಳ ಬಗ್ಗೆ ಚರ್ಚಿಸಿದರು. ಸಾರ್ವಜನಿಕರು ಶಾಂತರೀತಿಯಿಂದ ಇದ್ದು, ಆಸ್ಪತ್ರೆಯಲ್ಲಿ ಶುಚಿತ್ವ ಕಾಯ್ದುಕೊಂಡು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದರು.

# ಗ್ರಾಮ ಸಹಾಯಕರಿಗೆ ಮೊಬೈಲ್ ವಿತರಣೆ

**ಶಾಸಕ ಕೆ.ನೇಮಿರಾಜ್‌ನಾಯ್ಕ್ ಹೇಳಿಕೆ | ಸರ್ಕಾರ ಯೋಜನೆಗಳು ಸಾರ್ವಜನಿಕರಿಗೆ ದೊರೆಯಲಿ**



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಗ್ರಾಮೀಣ ಜನರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನೊದಗಿಸಲು, ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸಂಪರ್ಕ ಹೊಂದಿರುವ ಗ್ರಾಮ ಸಹಾಯಕರು, ಸದಾ ದೊರೆಯಬೇಕು. ಅವರ ಸೇವೆ ಅವಶ್ಯವಾಗಿದೆ ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ತಿಳಿಸಿದರು.

ಪಟ್ಟಣದ ಮಿನಿ ವಿಧಾನ ಸೌಧದ ಆವರಣದಲ್ಲಿ ಜರುಗಿದ, ತಾಲೂಕಿನ ಲೋಕಪ್ಪನ ಹೊಲದ ವ್ಯಾಪ್ತಿಯಲ್ಲಿರುವ, ಎಸ್.ಎಲ್.ಆರ್.ಮೆಟಾಲಿಕ್ಸ್ ಲಿಮಿಟೆಡ್‌ನಿಂದ ಸಿ.ಎಸ್. ಆರ್ ಯೋಜನೆ ಅಡಿಯಲ್ಲಿ, ಚೈತನ್ಯ ಗ್ರಾಮೀಣಾಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಸಹಯೋಗದೊಂದಿಗೆ, ಶಾಸಕರ ನಿರ್ದೇಶನದಂತೆ, ಗ್ರಾಮ ಸಹಾಯಕರಿಗೆ ಉಚಿತ ಮೊಬೈಲ್ ವಿತರಣೆಯ ವೇಳೆ ಪಾಲ್ಗೊಂಡು ಅವರು ಮಾತನಾಡಿದರು.

ಎಸ್.ಎಲ್.ಆರ್. ಕಂಪನಿಯೊಂದಿಗೆ ಮಾತನಾಡಿ, ಸಮಾಜ ಸೇವೆಯಾದ ಗ್ರಾಮ ಸಹಾಯಕರ ಕೆಲಸಕೂಡ ಸಾರ್ವಜನಿಕರ ಹಾಗೂ ತಾಲೂಕು ಆಡಳಿತ ಮತ್ತು ಸರ್ಕಾರದ ನಡುವಿನ ಸೇತುವೆ ಇದ್ದಂತೆ. ಆ ಕೆಲಸಕ್ಕೆ ಅನುಕೂಲವಾಗಲು ಒಂದು ಮೊಬೈಲ್ ಪೋನ್ ಇದ್ದರೆ ಸಾರ್ಥಕವಾಗುತ್ತದೆ ಎಂದು ಮೊಬೈಲ್‌ಗಳನ್ನು ನೀಡಲು ಮುಂದಾದರು. 55 ಗ್ರಾಮ ಸಹಾಯಕರಿಗೆ ಉಚಿತವಾಗಿ ಉತ್ತಮಗುಣ ಮಟ್ಟದ 5ಜಿ ಮೊಬೈಲ್‌ಗಳನ್ನು ನೀಡ ಲಾಗುತಿದೆ. ಗ್ರಾಮ ಸಹಾಯಕರು ಮೊಬೈಲ್‌ಗಳನ್ನು ದುರ್ಬಳಕೆ ಮಾಡಿಕೊಳ್ಳದೇ ಪಿ1, ಪಿ2, ಪಿ3, ಬೆಳೆ ಸಮೀಕ್ಷೆ ಕಾರ್ಯಗಳಿಗೆ ಇದು ಉಪಯೋಗವಾಗಲಿ ಎಂದರು. ಮುಂಬಾರುವ ದಿನಗಳಲ್ಲಿ ಗ್ರಾಮಲೆಕ್ಕಾಧಿಕಾರಿಗಳಿಗೆ, ಆಶಾ ಕಾರ್ಯಕರ್ತೆಯರಿಗೆ, ಕೃಷಿ ಇಲಾಖೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ಮೊಬೈಲ್ ಅಗತ್ಯತೆಇದ್ದು,

>>4



ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ AICC ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ವರಿಷ್ಠ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವರನ್ನು ಭೇಟಿಯಾಗಿ ರಾಜ್ಯದ ಪ್ರಸಕ್ತ ವಿದ್ಯಮಾನಗಳ ಕುರಿತು ಚರ್ಚೆ ನಡೆಸಿದರು. AICC ಪ್ರಧನ ಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸುರ್ಜೇವಾಲ, ಕೆ.ಸಿ.ವೇಣುಗೋಪಾಲ್ ಉಪಸ್ಥಿತರಿದ್ದರು.



## ವಿಜ್ಞಾನ

# ನೀರು ಏಕೆ ಎತ್ತರದ ಪ್ರದೇಶಕ್ಕೆ ಹರಿಯುವುದಿಲ್ಲ?

■ ಆರ್.ಬಿ.ಗುರುಬಸವರಾಜ

ಶೈಕ್ಷಣಿಕ ಪ್ರವಾಸಕ್ಕೆ ಹೋಗಿದ್ದ ರಂಜಿತ ಗೆಳೆಯರ ಜೊತೆ ಜಲಪಾತ ನೋಡುತ್ತಾ ನಿಂತಿದ್ದಳು. ಮೇಲಿನಿಂದ ಧುಮುಕುವ ಅಗಾಧ ನೀರನ್ನು ನೋಡಿ ಸಂತಸಗೊಂಡಳು. ನೀರು ಮೇಲಿನಿಂದ ಕೆಳಕ್ಕೆ ಹರಿಯುವುದನ್ನು ನೋಡಿ ಬಹುದಿನದಿಂದ ಮನದಲ್ಲಿದ್ದ ಪ್ರಶ್ನೆಯೊಂದು ಮತ್ತೆ ನೆನಪಾಯಿತು. "ಸರ್, ಹಳ್ಳ, ನದಿ, ಜಲಪಾತ ಹಾಗೂ ಇನ್ನಿತರೇ ಕಡೆಗಳಲ್ಲಿನ ನೀರು ಯಾವಾಗಲೂ ತಗ್ಗಾದ ಪ್ರದೇಶಕ್ಕೆ ಹರಿಯುತ್ತದೆ. ಆದರೆ ನೀರು ಯಾಕೆ ಎತ್ತರದ ಪ್ರದೇಶಕ್ಕೆ ಹರಿಯುವುದಿಲ್ಲ? ಎಂದು ಪಕ್ಕದಲ್ಲಿದ್ದ ಶಿಕ್ಷಕರನ್ನು ಕೇಳಿಯೇ ಬಿಟ್ಟಳು. ಇವಳ ಪ್ರಶ್ನೆಯನ್ನು ಮೆಚ್ಚಿಕೊಂಡ ಶಿಕ್ಷಕರು ಎಲ್ಲರನ್ನೂ ಕೂಡಿಸಿಕೊಂಡು ಅಲ್ಲಿಯೇ ಕ್ಲಾಸ್ ಪ್ರಾರಂಭಿಸಿದರು.



ಗುರುತ್ವಾಕರ್ಷಣೆಯ ಬಲದಿಂದ ನೀರು ಎತ್ತರದ ಪ್ರದೇಶಕ್ಕೆ ಹರಿಯುವುದಿಲ್ಲ. ಭೂಮಿಯ ಗುರುತ್ವಾಕರ್ಷಣೆಯು ನೀರನ್ನು ಒಳಗೊಂಡಂತೆ ವಸ್ತುಗಳನ್ನು ತನ್ನ ಕೇಂದ್ರದ ಕಡೆಗೆ ಎಳೆಯುತ್ತದೆ. ಗುರುತ್ವಾಕರ್ಷಣೆಯಿಂದಾಗಿ ನೀರು ಕೆಳಮುಖವಾಗಿ ಹರಿಯುತ್ತದೆ. ನೀರನ್ನು ಸುರಿಯುವಾಗ ಅಥವಾ ಎತ್ತರದಿಂದ ಬಿಡುಗಡೆ ಮಾಡಿದಾಗ ಅದು ಮುಂದೆ ಹರಿಯದಂತೆ ತಡೆಯುವ ಮೇಲ್ಮೈಯನ್ನು ತಲುಪುವವರೆಗೆ ಯಾವಾಗಲೂ ಕೆಳಮುಖವಾಗಿಯೇ ಹರಿಯುತ್ತದೆ. ನೀರು ಪಾತ್ರೆಯಲ್ಲಿ ಅಥವಾ ಪೈಪ್‌ನಲ್ಲಿ ಇದ್ದರೂ ಗುರುತ್ವಾಕರ್ಷಣೆಯಿಂದ ಅದು ಸ್ವಾಭಾವಿಕವಾಗಿ ಯಾವಾಗಲೂ ಕೆಳಮುಖವಾಗಿ ಹರಿಯುತ್ತದೆ. ನೀರು ಮೇಲ್ಮುಖವಾಗಿ ಹರಿಯಬೇಕಾದರೆ, ಗುರುತ್ವಾಕರ್ಷಣೆಯ ಬಲವನ್ನು ಬಲವಾಗಿ ಜಯಿಸಬೇಕು. ಇದಕ್ಕೆ ಯಂತ್ರದ ಅವಶ್ಯಕತೆ ಇದೆ. ಕೃತಕ ಬಲ ಹಾಕುವ ಮೂಲಕ ನೀರನ್ನು ಗುರುತ್ವಕ್ಕೆ ವಿರುದ್ಧ ದಿಕ್ಕಿನಲ್ಲಿ ಚಲಿಸುವಂತೆ ಮಾಡಬಹುದು. ಆದರೆ ಇದು ಕೃತಕ ಪ್ರಕಿಯೆಯೇ ಹೊರತು ಸ್ವಾಭಾವಿಕ ಪ್ರಕ್ರಿಯೆ ಅಲ್ಲ ಎಂಬುದನ್ನು ಮರೆಯಬಾರದು.

ಅಲ್ಲದೇ ನೀರಿನ ಅಣುಗಳ ನಡುವಿನ ಒಗ್ಗೂಡಿಸುವ ಶಕ್ತಿಯಾಗಿರುವ ನೀರಿನ ಮೇಲ್ಮೈ ಒತ್ತಡವು ನೀರು ಮೇಲ್ಮುಖವಾಗಿ ಹರಿಯುವುದನ್ನು ತಡೆಯುತ್ತದೆ. ನೀರಿನ ಅಣುಗಳ ನಡುವಿನ ಒಗ್ಗೂಡಿಸುವ ಬಲವು ದುರ್ಬಲವಾಗಿದೆ. ಅಂದರೆ ನೀರಿನ ಅಣುಗಳು ಒಂದರ ಮೇಲೊಂದು ಇದ್ದರೂ ಸಹ ಅವು ಪರಸ್ಪರ ಜಾರುವ ಸ್ಥಿತಿಯಲ್ಲಿ ಅಂಟಿಕೊಂಡಿರುತ್ತವೆ. ಒಂದರ ಮೇಲೊಂದು ದೃಢವಾಗಿ ನಿಲ್ಲಲು ಸಾಧ್ಯವಿಲ್ಲ ಹಾಗಾಗಿ ನೀರು ಎತ್ತರದ ಪ್ರದೇಶಕ್ಕೆ ಹರಿಯುವುದಿಲ್ಲ.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಬೇಟಿ ಪಡಾವ್ಡೋ, ಬೇಟಿ ಬಚಾವ್!

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ. ಶಿಕ್ಷಣ (Education) ಎಂಬುದು ಸಮಾಜದ ಮೂಲ ಅಡಿಪಾಯ ಎಂದೆನಿಸಿದ್ದು ಲಿಂಗ, ಹಿನ್ನೆಲೆ, ಆರ್ಥಿಕ ಸ್ಥಿತಿ, ಲೈಂಗಿಕ ದೃಷ್ಟಿಕೋನ ಮತ್ತು ಧರ್ಮವನ್ನು ಲೆಕ್ಕಿಸದೆ ಆರ್ಥಿಕ ಸ್ವಾತಂತ್ರ್ಯ ಮತ್ತು ಜ್ಞಾನ ಸೇರಿದಂತೆ ಜೀವನದ ವಿವಿಧ ಅಂಶಗಳನ್ನು ಸುಧಾರಿಸಲು ಹಾಗೂ ಮಹೋನ್ನತ ಗುರಿಯನ್ನು ಸಾಧಿಸಲು ಅವಕಾಶವನ್ನೊದಗಿಸುವ ಕ್ಷೇತ್ರವಾಗಿದೆ ಅಲ್ವಾ? ಏನ್ರಿ ಅಪರಾಧ ಮಾಡಿದ್ದೀವಿ ನಾವು, ಹೆಣ್ಣಾಗಿ ಹುಟ್ಟಿದ್ದು ತಪ್ಪಾ? ಉನ್ನತ ಶಿಕ್ಷಣ ಪಡಿಯೋತ್ತಿರುವುದು ತಪ್ಪಾ? ನಿಮಗೆ ಸಮಾನವಾಗಿ ಕೆಲಸ ಮಾಡೋದು ತಪ್ಪಾ? ರಾತ್ರಿ ಕೆಲಸ ಮಾಡೋದು ತಪ್ಪಾ? ಸುಂದರವಾಗಿರೋದು ತಪ್ಪಾ?ನಾವು ಓಡಾಡೋದು ತಪ್ಪಾ? ಅನ್ಯಾಯದ ವಿರುದ್ಧ ಹೋರಾಡೋದು ತಪ್ಪಾ? ನಿಮ್ಮ ಎಲ್ಲಾ ಆಸೆಗಳನ್ನು ತೀರಿಸಿಕೊಳ್ಳೋ ಭೋಗದ ವಸ್ತುಗಳ ನಾವು...? ನಾವು ನ್ಯಾಯದ ವಿರುದ್ಧ ಸ್ವಲ್ಪ ಧ್ವನಿ ಎತ್ತಿದ್ದರೆ ನಮ್ಮನ್ನು ರೇಪ್ ಮಾಡ್ತೀರಾ...? ಯಾಕೆ ನಮ್ಮ ವಿರುದ್ಧ ಹೋರಾಡುವ ತಾಕತ್ತಿಲ್ವಾ ನಿಮಗೆ? ನಮ್ಮೊಂದಿಗೆ ಸೆಣಸಾಡುವ ಧೈರ್ಯ ಇಲ್ವಾ ? ಬನ್ನಿ ಹೆಣ್ಣು ಮಕ್ಕಳೊಂದಿಗೆ ಪೈಪೋಟಿ ಮಾಡಿ, ಆದರೆ ಎಲ್ಲಾ ಬಿಟ್ಟು ಅತ್ಯಾಚಾರ, ಕೊಲೆ ಮಾಡಿದರೆ ನೀವು ಗೆದ್ದ ಹಾಗಾ ? ಹೆಣ್ಣಿಗೆ ಬೆಲೇನೇ ಇಲ್ವಾ? ನಾವು ಶಾಪಗ್ರಸ್ತರೆ. ?

ನಮಗೆ ನೋವಿಲ್ವಾ? ಸುಮಾರು 45 ನಿಮಿಷಗಳವರೆಗೂ ನರಕಯಾತನೆ ಅನುಭವಿಸಿದ ಹೆಣ್ಣಿನ ಕೂಗು ಯಾರಿಗೂ ಕೇಳಿಸಲೇ ಇಲ್ವಾ? ಇದು ಎಂತಹ ಆಸ್ಪತ್ರೆ, ಘನಘೋರ ಕೃತ್ಯ ನಡೆಯುತ್ತಿದ್ದರೂ ಆ ಹೆಣ್ಣಿನ ರಕ್ಷಣೆಗೆ ಯಾರು ಬರಲಿಲ್ಲವೆ? "ರಾಧಾ ಗೋವಿಂದ್ಕರ್" ಪ್ರತಿಷ್ಠಿತ ಆಸ್ಪತ್ರೆ ಇದ್ದರೂ ಕೂಡ DDR Duty Doctors Room ವ್ಯವಸ್ಥೆ ಯಾಕೆ ಇಲ್ಲ? ಸೆಮಿನಾರ್ ಹಾಲ್ ನಲ್ಲಿ ಮಲಗಬೇಕಾ? ಸತತವಾಗಿ 36 ಘಂಟೆ ಕೆಲಸ ಮಾಡುವುದು ಅಂದರೆ ಏನಿದರ ಅರ್ಥ? ಸಂಜಯ್ ರಾಯ್ ಒಬ್ಬ ಕಾಮುಕ, ಮಧ್ಯವ್ಯಸನಿ, ಅನೇಕ ಹೆಣ್ಣುಮಕ್ಕಳಿಗೆ ಶೋಷಣೆ ಮಾಡಿದ ಕ್ರಿಮಿನಲ್ ದುರ್ದೈವ ನೋಡಿ ಇವನು ಸಿವಿಲ್ ವಾಲೆಂಟರ್ ಅಂತೆ ಇವರು ಸಮಾಜ ಸುಧಾರಿಸತ್ತಾರೆಯೇ? ಇಂತಹ ಕ್ರಿಮಿನಲ್ಗಳಿಗೆ ಯಾವ ಆಧಾರದ ಮೇಲೆ ಹುದ್ದೆ ಕೊಟ್ಟಿರಬಹುದು, ಒಂದು ವೇಳೆ ಕೊಟ್ಟಿದ್ದರೂ ಇವನ ಅನೈತಿಕ ಚಟುವಟಿಕೆಗಳು ಯಾರ ಗಮನಕ್ಕೂ ಬಂದಿಲ್ವ ? ನಾಲಕ್ಕು ನಾಲಕ್ಕು ಮದುವೆಗಳನ್ನು ಮಾಡಿ ಕೊಂಡಿರುವ ಆಸಾಮಿ, ಕಾಮುಕ ಪಿಶಾಚಿಯನ್ನು ಹುದ್ದೆಯಿಂದ ಮೊದಲೆ ಡಿಸ್ಮಿಸ್ ಮಾಡಬಹುದಿತ್ತಲ್ವ? ಸಾವಿರಾರು ಪ್ರಶ್ನೆಗಳು?



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ
Scan For Digital Colourful
HAMPI TIMES E-paper

"ಬೇಟಿ ಪಡಾವ್,ಬೇಟಿ ಬಚಾವ್" ತಂದೆ ತಾಯಿ ಹೆಣ್ಣು ಮಕ್ಕಳಿಗೂ ಕೂಡ ಉನ್ನತ ಶಿಕ್ಷಣ ಸಿಗಲಿ, ಅವರು ಕೂಡ ಆರ್ಥಿಕವಾಗಿ, ಸಾಮಾಜಿಕವಾಗಿ ಬಲಿಷ್ಠರಾಗಿ ನೆಮ್ಮದಿಯ ಜೀವನ ರೂಪಿಸಿ ಕೊಳ್ಳಲಿಕ್ಕೆ ಅಂತ ನಗರ ಪ್ರದೇಶಗಳಿಗೆ ಕಳಿಸುತ್ತಾರೆ, ಆದರೆ ಆ ಹೆಣ್ಣು ಮಗು ಸುರಕ್ಷತೆಯಿಂದ ಮನೆಗೆ ವಾಪಾಸ್ ಬರುತ್ತಾಳೆ ಎನ್ನುವ ನಂಬಿಕೆ ಈಗ ಪಾಲಕ ಪೋಷಕರಿಗೆ ಇಲ್ಲ ರಿ.. ಎಂತಹ ಹೇಯ ಕೃತ್ಯ ಇದು, ಖಂಡನಿಯ. ಉನ್ನತ ಶಿಕ್ಷಣ ಸಂಸ್ಥೆಗಳು ಹೆಣ್ಣುಮಕ್ಕಳ ಸುರಕ್ಷತೆಗಾಗಿ ವಿಶೇಷ ಕಾಳಜಿ ವಹಿಸಬೇಕು, PG ಗಳು, ಹಾಸ್ಟೆಲಗಳು, ಕ್ಯಾಂಪಸ್ಗಳು ಎಲ್ಲಾ ಕಡೆಗಳ್ಳಲ್ಲೂ ಪೊಲೀಸ್ ಆರಕ್ಷಕರ ನೇಮಕ ಮಾಡಬೇಕು, ದುರ್ದೈವ ನೋಡಿ ಕೋಲ್ಕತ್ತಾದಲ್ಲಿ ಸಿವಿಲ್ ವಾಲೆಂಟರ್ ಎಂಬಾತನಿಂದಲೇ ಈ ಕೃತ್ಯ ಆಗಿರುವುದು, ಯಾರ ಮೇಲೆ ನಂಬಿಕೆ, ವಿಶ್ವಾಸ ಇಲ್ಲದ ಹಾಗೆ ಆಗಿದೆ.



ನಿರ್ಭಯ, ಹೈದ್ರಾಬಾದ್ ಯುವತಿ, ಮೊನ್ನೆ ಹುಬ್ಬಳ್ಳಿಯಲ್ಲಿ ಕಾಲೇಜು ಕ್ಯಾಂಪಸ್ನಲ್ಲಿ ಹಾಡುಹಗಲೆ ವಿದ್ಯಾರ್ಥಿನಿ ಕೊಲೆ, ಅದು ಮಾಸುವ ಮೊದಲೆ, ಇನ್ನೊಂದು ಅನಾಥ ಯುವತಿ ಕೊಲೆ. ಕಾನೂನು ಏನು ಮಾಡುತ್ತಿದೆ? ಯಾಕೆ ಆರೋಪಿಗಳಿಗೆ ಗಲ್ಲು ಶಿಕ್ಷೆ ಕೊಡುತ್ತಿಲ್ಲ...? ಯಾಕೆ ವಿಳಂಬ? ಕಾನೂನಿನ ನಿಧಾನಗತಿಯ ಕಾರ್ಯಾಚರಣೆಗಳಿಂದ ಅಪರಾಧಗಳಿಗೆ ಭಯ ಇಲ್ಲದ ಹಾಗೆ ಆಗಿದೆ, ಎಲ್ಲೆಂದರಲ್ಲಿ ಸರಗಳ್ಳತನ..., ಬೆಂಗಳೂರು ನಲ್ಲಿ ಈಗಂತೂ ಭಯಾನಕ ವಾತಾವರಣ, ನಿರ್ಜನ ಪ್ರದೇಶದಲ್ಲಿ ಒಂಟಿ ಮಹಿಳೆಯರು ಸಿಕ್ಕರೆ ಸಾಕು ಅಮಾನವೀಯವಾಗಿ ಎಳೆದಾಡುವ ದೃಶ್ಯಗಳು ನ್ಯೂಸ್ ಚಾನೆಲ್ ಗಳಲ್ಲಿ ಬಿತ್ತರಿಸುತ್ತಾರೆ, ಆದರೆ ಅಪರಾಧಿಗಳಿಗೆ ಶಿಕ್ಷೆಯಾಗಿದ್ದು ಮಾತ್ರ ಗೊತ್ತೆ ಇಲ್ಲ.ಯಾಕೊ ವಾತಾವರಣ ತುಂಬಾ ಕೆಟ್ಟಿದೆ ಇದಕ್ಕೆ ನಮ್ಮ ಕಾನೂನಿನ ವ್ಯವಸ್ಥೆ ಬದಲಾಗಬೇಕು, ಅಪರಾಧಗಳಿಗೆ ತುರ್ತಾಗಿ ಕಠಿಣ ಶಿಕ್ಷೆಯಾಗಬೇಕು.

ಕಾನೂನು ಬದಲಾಗಬೇಕು.. ಇನ್ನೂ ಯಾರು ಯಾರು ಇಂತಹ ಘಟನೆಗಳಿಗೆ ಕಾರಣಿಕರ್ತರು ಇದಾರೆ, ಈ ವ್ಯವಸ್ಥೆ ಹಿಂದೆ ಇರುವ ಉದ್ದೇಶ ಎಲ್ಲವೂ ತನಿಖೆಯಾಗಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ಆಗಬೇಕು...

ಆ ಮುಗ್ಧ ಜೀವದ ಆತ್ಮಕ್ಕೆ ಶಾಂತಿ ಸಿಗಲಿ... ತಂದೆ ತಾಯಿ ಕುಟುಂಬಕ್ಕೆ ದುಃಖಭರಿಸುವ ಶಕ್ತಿ ಸಿಗಲಿ... ಖುಖಕ ಡಿಯರ್ ಡಾಕ್ಟರ್ ಜಿ..... ಇನ್ನೂ ಎಷ್ಟು ಜೀವಗಳು ಬಲಿಯಾಗುತ್ತವೆಯೊ? ನಮಗೆ ಎಲ್ಲಿದೆ ಸುರಕ್ಷತೆ? ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಯುವ ಹಿಂಸೆಯು ಅತ್ಯಂತ ವ್ಯಾಪಕವಾಗಿದೆ. ಇದು ಮಾನವ ಹಕ್ಕು ಉಲ್ಲಂಘನೆಗಳಲ್ಲಿ ಅತ್ಯಂತ ಗಂಭೀರವಾದುದು. ಜಗತ್ತಿನಾದ್ಯಂತ ಮೂವರು ಮಹಿಳೆಯರಲ್ಲಿ ಒಬ್ಬ ಮಹಿಳೆಯು ಹಿಂಸೆಗೆ ಒಳಗಾಗುತ್ತಾಳೆ. ಕಳೆದ ಒಂದು ದಶಕದಲ್ಲಿ ಈ ಪ್ರಮಾಣವು ಬದಲಾಗಿದ್ದೇ ಇಲ್ಲ. ಪ್ರತಿ ಒಂದು ತಾಸಿನಲ್ಲಿ ಐವರು ಮಹಿಳೆಯರು ಅಥವಾ ಹೆಣ್ಣು ಮಕ್ಕಳು ತಮ್ಮ ಕುಟುಂಬದವರಿಂದಲೇ ಕೊಲೆಯಾಗುತ್ತಾರೆ ಎಂಬುದು ತೀರಾ ಇತ್ತೀಚಿನ ಅಂದಾಜು ಎಂದು ವಿಶ್ವ ಸಂಸ್ಥೆಯು ಹೇಳಿದೆ.

ಒಂದು ಸಮಾಜದಲ್ಲಿರುವ ಸ್ತ್ರೀ ಪುರುಷ ಸಂಬಂಧ ಎಷ್ಟು ಆರೋಗ್ಯಕರವಾಗಿದೆ ಎನ್ನುವುದು, ಮಾನವನು ತನ್ನ ಪಶು ಮನಃಸ್ಥಿತಿಯಿಂದ ಮನುಷ್ಯನಾಗುವತ್ತ ಎಷ್ಟು ಸಾಗಿದ್ದಾನೆ ಎನ್ನುವುದರ ಅಳತೆಗೋಲಾಗಿದೆ' ಎಂದು ಕಾರ್ಲ್‌ಮಾರ್ಕ್ಸ್ ಹೇಳುತ್ತಾರೆ. ಆದರೆ ಎಷ್ಟು ಕ್ರೂರ ಘಟನೆಗಳು ನಡೆಯುತ್ತಿವೆ. ಇಂಥವುಗಳನ್ನು ಖಂಡಿಸುವ. ಇಂತಹ ಘಟನೆಗಳಿಗೆ ಕಾರಣಿಕರ್ತರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಬೇಕಲ್ಲವೇ.?

# ಕ್ರೀಡೆಯಲ್ಲಿ ಸಂಯಮ... ಲಕ್ಷ್ಯ ಸೇನ್

ತಾನು ಇಲ್ಲವೇ ತನ್ನ ತಂಡ ಗೆದ್ದಾಗ ಒಬ್ಬ ವ್ಯಕ್ತಿ ಹೇಗೆ ವರ್ತಿಸಬಹುದು.... ಜೋರಾಗಿ ಕಿರುಚುತ್ತಾ ಮೈದಾನದ ತುಂಬಾ ಓಡಾಡಬಹುದು, ತನ್ನ ಜೊತೆಗಾರ ಕ್ರೀಡಾಪಟುಗಳನ್ನು ತಬ್ಬಿ ಸಂತಸ ಪಡಬಹುದು, ನೆಲವನ್ನು ಗುದ್ದಿ ನಮಿಸಿ ಧನ್ಯತೆಯನ್ನು ಅರ್ಪಿಸಬಹುದು, ಅಥವಾ ಆಕಾಶದತ್ತ ಕೈ ಮಾಡಿ ದೇವರಿಗೆ ಕೃತಜ್ಞತೆ ಸಲ್ಲಿಸಬಹುದು. ಕ್ರೀಡೆಯಲ್ಲಿ ಇದು ಯಾವುದೂ ತಪ್ಪಲ್ಲ. ಗೆಲುವು ತರುವ ಹುಮ್ಮಸ್ಸೇ ಅಂತಹದ್ದು.

ಅದರಲ್ಲೂ ದೇಶಕ್ಕಾಗಿ ಆಡುವಾಗ,ನೂರಾರು ಕೋಟಿ ಜನರ ನಿರೀಕ್ಷೆ ಮತ್ತು ಭರವಸೆಗಳು ತಮ್ಮ ಮೇಲಿರುವಾಗ ಅದಕ್ಕೆ ತಕ್ಕಂತೆ ಆಡಿದಾಗ ಅವರ ಹೃನ್ಮನಗಳು ಕೃತಜ್ಞತೆಯಿಂದ ತುಂಬಿ ತುಳುಕುತ್ತವೆ.

ವೈಯಕ್ತಿಕವಾಗಿ ಗೆಲ್ಲುವ ಸಡಗರ, ಜನರ ಪ್ರೋತ್ಸಾಹ, ಆಟದ ಮೇಲಿನ ಅಭಿಮಾನ ಅವರಲ್ಲಿ ಸಂಭ್ರಮವನ್ನು ಉಂಟುಮಾಡುವುದು.

ಆದರೆ ಇದೆಲ್ಲಕ್ಕಿಂತಲೂ ವಿಭಿನ್ನವಾಗಿ ನಮ್ಮ ದೇಶದ ಕ್ರೀಡಾಪಟುವೊಬ್ಬರು ಅಂತರರಾಷ್ಟ್ರೀಯವಾಗಿ ಆಡಲ್ಪಡುವ ಒಲಿಂಪಿಕ್ ಪಂದ್ಯಾವಳಿಯಲ್ಲಿ ತನ್ನ ಎದುರಾಳಿಯ ವಿರುದ್ಧದ ಪಂದ್ಯದಲ್ಲಿ ಗೆಲುವು ಸಾಧಿಸಿದ ನಂತರ ಎದುರಾಳಿಯ ಕೈಯನ್ನು ಹಿಡಿದು ಕುಲುಕಿ ಅಭಿನಂದಿಸಿದ್ದಾರೆ. ಮೇಲ್ನೋಟಕ್ಕೆ ಅವರ ಈ ಕ್ರಮ ಸಹಜ ಎಂದು ತೋರಬಹುದು, ಆದರೆ ವಿಶ್ವ ನಂಬರ್ 22ನೇ ಕ್ರಮಾಂಕದ ಆಟಗಾರನಾದ ಲಕ್ಷ್ಯ ಸೇನ್ ಉತ್ತಮ ಮಾನವೀಯ ಮೌಲ್ಯಗಳನ್ನು ಒಳಗೊಂಡ ಆಟಗಾರ ಎಂದು ತಮ್ಮ ಈ ನಡೆಯ ಮೂಲಕ ಸಾಬೀತು ಪಡಿಸಿದ್ದಾರೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

ನಿಜವಾಗಿಯೂ ಲಕ್ಷ್ಯ ಸೇನ್ ಪ್ಯಾರಿಸ್ ನಲ್ಲಿ ನಡೆದ 2024ರ ಒಲಿಂಪಿಕ್ಸ್ ನ ಬ್ಯಾಡ್ಮಿಂಟನ್ ಕ್ವಾರ್ಟರ್ ಫೈನಲ್ ನಲ್ಲಿ ಗೆದ್ದದ್ದು.... ಇದುವರೆಗೂ ಭಾರತದ ಯಾವ ಪುರುಷ ಆಟಗಾರನೂ ಸಾಧಿಸದ ಗೆಲುವಾಗಿತ್ತು. ಸಹಜವಾಗಿಯೇ ಇದು ಎಲ್ಲಾ ಕ್ರೀಡಾ ಪ್ರೇಮಿಗಳಲ್ಲಿ ಸಂತಸವನ್ನು ಉಕ್ಕಿಸಿತ್ತು. ಆದರೆ ಸ್ವತಹ ಗೆಲುವಿನ ರೂವಾರಿಯಾಗಿದ್ದ ಲಕ್ಷ್ಯ ಸೇನ್ ತಮ್ಮ ಸಂಯಮದ ನಡವಳಿಕೆಯಿಂದ ಜನರ ಮೆಚ್ಚುಗೆ ಗಳಿಸಿದರು.

ಇದರ ಹಿನ್ನೆಲೆಯನ್ನು ಗಮನಿಸಿದರೆ ಕ್ವಾರ್ಟರ್ ಫೈನಲ್ ನಲ್ಲಿ ಲಕ್ಷ್ಯ ಸೇನ್ ಎದುರಿಸಿದ ತೈಪೆಯ ಆಟಗಾರ ಚೌ ಟಿ ಯೆನ್ ಚೆನ್ ಎರಡು ವರ್ಷಗಳ ಹಿಂದೆ ಲಕ್ಷ್ಯಸೇನ್ ರನ್ನು ಸಿಂಗಪುರ್ ನಲ್ಲಿ ನಡೆದ ಅಂತರಾಷ್ಟ್ರೀಯ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಸೋಲಿಸಿದ್ದರು. ತದನಂತರ ತೈಪೆಯ ಚೌ ಕರುಳಿನ ಕ್ಯಾನ್ಸರ್‌ನಿಂದ ಬಳಲಿ ಚಿಕಿತ್ಸೆಗೊಳಗಾಗಿದ್ದರು. 2023ರಲ್ಲಿ ಕರುಳಿನ ಕ್ಯಾನ್ಸರ್ ನ ಶಸ್ತ್ರಚಿಕಿತ್ಸೆಗೊಳಗಾಗಿದ್ದ ಚೌ ಮುಂದಿನ ಕೆಲವೇ ತಿಂಗಳುಗಳಲ್ಲಿ ತಮ್ಮ ಮೊದಲಿನ ಫಾರ್ಮಿಗೆ ಬಂದು ಆಟದ ಅಭ್ಯಾಸದಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದರು. ಇದರ ಅರಿವಿದ್ದ ಲಕ್ಷ್ಯ ಸೇನ್ ಆತನ ಎದುರು ತಾವು ಗೆದ್ದಾಗ ಸಂಭ್ರಮಿಸದೆ ಚೆನ್ನಾಗಿ ಸ್ಪರ್ಧಿಸಿದ್ದಕ್ಕೆ ತಮ್ಮ ಎದುರಾಳಿ ಆಟಗಾರನನ್ನು ಅಭಿನಂದಿಸಿ ಕೈಕುಲುಕಿದ್ದು ಅವರ ಸ್ಪರ್ಧಾ ಸ್ಫೂರ್ತಿಯನ್ನು ತೋರುತ್ತದೆ.

ನೋಡಿದಿರಾ ಸ್ನೇಹಿತರೆ, ಇಂತಹ ಮಾನವೀಯ ಮೌಲ್ಯಗಳೇ ನಮ್ಮನ್ನು ಹಿಮಾಲಯದೆತ್ತರಕ್ಕೆ ಬೆಳೆಸುವುದು. ನಮ್ಮೆದುರಿಗಿರುವ ವ್ಯಕ್ತಿ ಅಸಹಾಯಕ ಪರಿಸ್ಥಿತಿಯಲ್ಲಿಯೂ ಕೂಡ ತನ್ನ ಆತ್ಮ ಬಲವನ್ನು ಪಣಕ್ಕಿಟ್ಟು ಆಡಿದಾಗ ಆತನ ಎದುರಾಳಿ ತನ್ನ ಗೆಲುವಿಗಿಂತ ಹೆಚ್ಚಾಗಿ ತನ್ನೊಂದಿಗೆ ಆಡಿದಾತನ ಆತ್ಮ ಬಲವನ್ನು ಪ್ರಶಂಶಿಸಿದ್ದು ಆತನ ಹೃದಯದಲ್ಲಿ ಶಾಶ್ವತ ಸ್ಥಾನ ಗಳಿಸುತ್ತಾನೆ.

ಸಣ್ಣಪುಟ್ಟ ಕಾರಣಗಳಿಗೆ ಮನಸ್ತಾಪ ಮಾಡಿಕೊಳ್ಳುವ, ಮದುವೆಯ ಆಮಂತ್ರಣ ಪತ್ರಿಕೆ, ಸರ್ಕಾರದ ವಿವಿಧ ಇಲಾಖೆಗಳ ಕಾರ್ಯಕ್ರಮಗಳಲ್ಲಿ ಅಚಾತುರ್ಯದಿಂದಾಗಿ ಮತ್ತೆ ಕೆಲವೊಮ್ಮೆ ಸಂಬಂಧಪಟ್ಟವರ ನಿಷ್ಕಾಳಜಿಯಿಂದ ತಮ್ಮ ಹೆಸರು ಬಿಟ್ಟು ಹೋಗಿರುವುದು ಮುಂತಾದ ಕಾರಣಗಳನ್ನು ಮುಂದೊಡ್ಡಿ ಕಾರ್ಯಕ್ರಮಗಳಲ್ಲಿ ಭಾಗವಹಿಸದೇ ಹೋಗುವ ಸಾಕಷ್ಟು ಸ್ವಾಭಿಮಾನಿಗಳು ನಮ್ಮಲ್ಲಿ ಇದ್ದಾರೆ, ಮತ್ತೆ ಕೆಲ ದುರಭಿಮಾನಿಗಳು ಇದೇ ಕಾರಣವನ್ನು ಮುಂದೊಡ್ಡಿ ಜಗಳ ತೆಗೆಯುವ, ವಿನಾಕಾರಣ ಕಾರ್ಯಕ್ರಮದ ಉದ್ದೇಶವನ್ನು ಹಾಳು ಗೆಡಹುವ ಕೆಲಸಗಳಲ್ಲಿ ತೊಡಗುತ್ತಾರೆ.


ಈ ಜಗತ್ತನ್ನೇ ಬೆಳಗುವ ಸೂರ್ಯ,ನಾವು ಉಸಿರಾಡುವ ಗಾಳಿ, ಕುಡಿಯುವ ನೀರು, ನಡೆದಾಡುವ ನೆಲ ಇವುಗಳು ಯಾರ ದಾರಿಯನ್ನೂ ಕಾಯದೆ, ಯಾರ ಹೊಗಳಿಕೆಗೂ ಹಿಗ್ಗದೆ ಯಾರ ತೆಗಳಿಕೆಗೂ ಕುಗ್ಗದೆ ತಮ್ಮ ತಮ್ಮ ಪ್ರಕೃತಿ ಸಹಜ ಧರ್ಮಗಳನ್ನು, ಕರ್ತವ್ಯಗಳನ್ನು ಪಾಲಿಸುತ್ತವೆ.




ಮತ್ತೆ ಕೆಲ ಜನ ತಮ್ಮ ಅದ್ಭುತ ಮತ್ತು ಅಸಾಧಾರಣ ನಡವಳಿಕೆಗಳಿಂದ ಜನಮಾನಸದಲ್ಲಿ ಉಳಿದು ಹೋಗುತ್ತಾರೆ.... ಅಂಥವರಲ್ಲಿ ಭಾರತದ ಉದಯೋನ್ಮುಖ ಪ್ರತಿಭೆ ಲಕ್ಷ್ಯಸೇನ್ ಒಬ್ಬರು. ಇನ್ನೂ ಚಿಕ್ಕವಯಸ್ಸಿನ ಲಕ್ಷ್ಯಸೇನ್ ತಮ್ಮ ಸತ್ವಯುತ ಆಟದಿಂದ, ಮೌಲ್ಯಯುತ ಜೀವನದಿಂದ ಭಾರತದಲ್ಲಷ್ಟೇ ಅಲ್ಲ... ವಿಶ್ವದ ಅಗ್ರ ಕ್ರಮಾಂಕದ ಆಟಗಾರನಾಗಿ ಹೊರಹೊಮ್ಮಲಿ ಎಂದು ಹಾರೈಸೋಣ.

ಕವಿ ಮನಸು

## ಬಣ್ಣಿಸಲಾಗದು ನನಗೆ



ಒಂದೇ ಬಳ್ಳಿಯಲರಳಿದ ಹೂಗಳು
ಒಂದೆಡೆ ಸೇರಿದ ಖುಷಿಗೆ
ಅಂದದ ನಸುನಗು ಹೊಮ್ಮಿದೆ ಮೊಗದಲಿ
ಚಂದದೆ ನಿಂತರು ನುಡಿಗೆ

ನೀಲಿಯ ಬಣ್ಣದ ಸೀರೆಯನುಟ್ಟರು
ಹೋಲುವ ಬಣ್ಣದ ರವಿಕೆ
ಬಾಲೆಯರೀರ್ವರ ಶಿರದಲಿ ಗಿಳಿಗಳು
ನೀಲಿಯ ವರ್ಣವು ಅವಕೆ

ಹಿರಿಯಳು ಚಂದದಿ ಬಾಚಿದ ತನ್ನಯ
ತುರುಬನು ಬಿಗಿದಳು ಮೇಲೆ
ಕಿರಿಯವಳೇತಕೊ ಹೆಣೆದಳು ಜಡೆಯನು
ಹಿರಿಹಿರಿ ಹಿಗ್ಗುವ ಬಾಲೆ

ಬೇರೆಯೆ ಲೋಕದ ವಾಸಿಗಳಾತರ
ತೋರುವರೀರ್ವರು ನಮಗೆ
ನಾರೀಯರೀರ್ವರು ಬಂದಿಹರಿಲ್ಲಿಗೆ
ದಾರಿಯ ಮರೆಯುತ ಇಳೆಗೆ

ಚಿನ್ನದ ನಗರಿಯು ತವರಾಗಿಹುದೇ
ಹೊನ್ನಕಿರೀಟವು ತಲೆಗೆ
ಮನ್ನಿಸಿ ನನ್ನನು ಚೆಲುವಿನ ಗಣಿಗಳ
ಬಣ್ಣಿಸಲಾಗದು ನನಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಮಳೆಯ ರುದ್ರ ನರ್ತನ

ಕೊಡಗಿನಲ್ಲಿ ಮಳೆ ರುದ್ರತಾಂಡವ
ಕೇರಳದಲ್ಲಿಯೂ ರುದ್ರ ತಾಂಡವ
ಜನ ಮನದಲಿ ದುಃಖದ ಭಾವ
ನಿರಾಶ್ರಿತರಿಗೆ ಮಿಡಿಯುತಿದೆ ಮನ।

ಯಾರ ಪಾಪವೋ ಶಾಪವೋ
ಮುಗಿಲ ಮೋಡ ಕಳಚಿದೆ
ಜಲರಾಶಿ ಭೂ ಕಾಣದಂತೆ ಮಾಡಿದೆ
ಮನೆ ಮಠ ಇನ್ನಿಲ್ಲವಾಗಿಸಿದೆ।

ಹೊಲ ಗದ್ದೆ ಹೇಳಹೆಸರಿಲ್ಲವಾಗಿವೆ
ಸಾವಿನ ಲೆಕ್ಕ ಯಾರಿಗೂ ತಿಳಯದಾಗಿದೆ
ಪಶು ಪಕ್ಷಿ ಅನಾಥವಾಗಿ ಕಂಗಾಲಾಗಿವೆ
ಗಂಜಿ ಕೇಂದ್ರ ನಿರಾಶ್ರಿತ ತಾಣವಾಗಿವೆ।

ಮೂಲೆ ಮೂಲೆಗಳಿಂದ ಆನುಕಂಪದಲೆ
ಹರಿದು ಬರುತಿದೆ ದವಸಧಾನ್ಯಗಳ ಕಣಜ
ಕಳ್ಳರುಕಾಕರು ಕದಿಯಲು ಹಾಕಿದರು ಬಲೆ
ಒದ್ದು ಕೊಡಬೇಕು ಧೀರ್ಘ ಕಠಿಣ ಸಜೆ।

ಯಾವ ಶ್ರೀಮಂತಿಕೆ ಏನೂ ಮಾಡಲಿಲ್ಲ
ಯಾವ ಶಕ್ತಿಯ ಆಟ ನಡೆಯಲಿಲ್ಲ
ಏನಿದ್ದರೂ ಏನೂ ಇಲ್ಲವಾಗಿದೆ ಈಗ
ದೇವರ ಮುನಿಸಿಗೆ ತಲೆಬಾಗಬೇಕು ಬೇಗ।

ಕಾಡು ಮೇಡ ಕಡಿದು ಖಾಲಿ ಮಾಡಿ ಬಿಟ್ಟೆ
ಊರೆಲ್ಲ ಬರೀ ಕಾಂಕ್ರೇಟ್ ಮಾಡಿ ಬಿಟ್ಟೆ
ಸೃಷ್ಠಿಯ ಮುನಿಸಿಗೆ ಕಾರಣ ನೀನಾಗಿಬಿಟ್ಟೆ
ಸೃಷ್ಠಿ ಮುನಿದರೆ ಝೀರೋ ತಿಳಿದು ನಡೆ॥

– ಚಂದ್ರಶೇಖರಯ್ಯ ರೋಣದಮಠ

ಉಚಿತ-ಖಚಿತ!
ಪತ್ರಿಕೆಯ ಓದು ಕಣ್ಣಿಗೆ ಹಿತ, ಮೊಬೈಲ್ ಓದು ಉಚಿತ, ಕಣ್ಣಿಗೆ ಹಾನಿ ಖಚಿತ!



ಮಕ್ಕಳ ಕೈಗೆ ಮೊಬೈಲ್ ಬದಲಿಗೆ, ಪತ್ರಿಕೆ ನೀಡಿ ಬದಲಾವಣೆ ಕಾಣಿರಿ...
ಸ್ಥಳೀಯ ಸುದ್ದಿಗಳಿಗಾಗಿ ಹಂಪಿ ಟೈಮ್ಸ್ ಪತ್ರಿಕೆ ಓದಿರಿ
ಹಂಪಿ ಟೈಮ್ಸ್ ಬಳಗದ ಕಳಕಳಿ ಬೆಲೆ ರೂ 2

# ನೇಣಿನ ಕುಣಿಕೆಗೆ ನಗುತ್ತಲೇ ಕೊರಳೊಡ್ಡಿದ ಕ್ರಾಂತಿಕಾರಿ ಶಿವರಾಮ ಹರಿ ರಾಜ್‌ಗುರು


## ದೇಶಪ್ರೇಮ ಮೆರದ ಮರಾಠಿ ದೇಶಸ್ಥ ಬ್ರಾಹ್ಮಣ ಕುಟುಂಬದ ಕುವರ | ಜನ್ಮದಿನದ ಸ್ಮರಣೆ

ಕೇವಲ ಇಪ್ಪತ್ಮೂರರ ಹರೆಯದ ಶಿವರಾಮ ಹರಿ ರಾಜ್‌ಗುರು ಎಂಬ ಕ್ರಾಂತಿಕಾರಿ ನಸು ನಗುತ್ತಲೇ ನೇಣಿನ ಕುಣಿಕೆಗೆ ತಲೆಯೊಡ್ಡುತ್ತಾನೆ. ಇಂದು ಆ ಕೆಚ್ಚೆದೆಯ ಕಲಿಯ ಜನ್ಮದಿನ. ನಮಗಾಗಿ ಪ್ರಾಣ ಬಲಿದಾನ ನೀಡಿದ ವೀರರನ್ನು ಸ್ಮರಿಸುತ್ತ ಅವರಿಗೊಂದು ನುಡಿನಮನವನ್ನು ಸಲ್ಲಿಸೋಣವೇ..

ಶಿವರಾಮ ಹರಿ ರಾಜ್‌ಗುರು ಇವರು 24 ಆಗಸ್ಟ್ 1908 ರಂದು ಪುಣೆ ಬಳಿ ಭೀಮಾ ನದಿಯ ದಡದಲ್ಲಿನ ಖೇಡ್ ಎಂಬ ಪ್ರದೇಶದಲ್ಲಿ ಪಾರ್ವತಿ ದೇವಿ ಮತ್ತು ಹರಿನಾರಾಯಣ ರಾಜಗುರು ದಂಪತಿಗಳ ಪುತ್ರನಾಗಿ, ಮರಾಠಿ ದೇಶಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರು ಕೇವಲ ಆರು ವರ್ಷ ವಯಸ್ಸಿನ ಬಾಲಕನಿದ್ದಾಗಲೇ ಇವರ ತಂದೆ ಸ್ವರ್ಗಸ್ಥರಾದರು. ಕುಟುಂಬದ ಜವಾಬ್ದಾರಿ ಅಣ್ಣ ದಿನಕರ್ ಅವರ ಹೆಗಲೇರಿತು. ಖೇಡ್‌ನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಶಿವರಾಮರು ನಂತರ ಪುಣೆಯ ನ್ಯೂ ಇಂಗ್ಲಿಷ್ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡಿದರು. ಇವರು ಚಿಕ್ಕ ವಯಸ್ಸಿನಲ್ಲೇ ಸೇವಾದಳಕ್ಕೆ ಸೇರಿ ರಾಷ್ಟ್ರಭಕ್ತಿ ಮೆರೆದರು. ಶಿಸ್ತುಬದ್ಧ ಜೀವನಕ್ರಮ ರಾಷ್ಟ್ರೀಯತೆ, ರಾಷ್ಟ್ರಭಕ್ತಿ ಇವುಗಳನ್ನು ಅಳವಡಿಸಿಕೊಂಡಿದ್ದ ಶಿವರಾಮ್ ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್‌ನ ಸದಸ್ಯರಾಗಿದ್ದರು. ಏನಾದರೂ ಆಗಲಿ ಹೇಗಾದರೂ ಆಗಲಿ ಭಾರತವನ್ನು ಬ್ರಿಟಿಷ್ ಆಳ್ವಿಕೆಯಿಂದ ಮುಕ್ತಗೊಳಿಸಬೇಕೆಂದು ಹಗಲಿರುಳು ಯೋಚಿಸಿ, ಕಾರ್ಯೋನ್ಮುಖರಾಗಿದ್ದರು. ಹುಲಿಯ ನಡೆ, ಚಾಣಾಕ್ಷನ ಮತಿ, ನರ ನಾಡಿಗಳಲ್ಲಿ ರಾಷ್ಟ್ರಭಕ್ತಿಯಿಂದ ಹರಿಯುತ್ತಿದ್ದ ಬಿಸಿ ನೆತ್ತರು, ನುಡಿಯಲ್ಲಿದ್ದದ್ದು "ವಂದೇ ಮಾತರಂ" ಭಾರತಾಂಬೆಯನ್ನು ದಾಸ್ಯದಿಂದ ಬಂಧಮುಕ್ತಗೊಳಿಸುವ ಕನಸು ಹೊತ್ತಿದ್ದ ಯುವ ಕ್ರಾಂತಿಕಾರಿ ರಾಜಗುರು.

ಭಾರತೀಯರ ಸಂಪತ್ತನ್ನು ಲೂಟಿಗೈಯುತ್ತಿದ್ದ ಅಂಗ್ಲರ ವಿರುದ್ಧ ಅವರದೇ ರೀತಿಯಲ್ಲಿ ಬ್ರಿಟಿಷ್ ರೈಲಿನಲ್ಲಿ ಸಾಗಿಸುತ್ತಿದ್ದ ಹಣವನ್ನು ಕ್ರಾಂತಿಕಾರಿಗಳು ತಮ್ಮ ಚಟುವಟಿಕೆಗಳಿಗಾಗಿ ಮತ್ತು ಸಂಘಟನೆಯನ್ನು ಬಲಪಡಿಸಲು ಲೂಟಿಗೈದರು. ಕಾಕೋರಿ ಪಿತೂರಿಯಲ್ಲಿ ತೊಡಗಿಸಿಕೊಂಡಿದ್ದಕ್ಕಾಗಿ ಇವರನ್ನು ಸ್ಮರಿಸುತ್ತಾರೆ. ರಾಮ್ ಪ್ರಸಾದ್ ಬಿಸ್ಮಿಲ್ ಮತ್ತು ಅಶ್ಫಾಕುಲ್ಲಾ ಖಾನ್ ಅವರಂತಹ ಇತರ ಕ್ರಾಂತಿಕಾರಿಗಳೊಂದಿಗೆ ರಾಜಗುರು ಈ ಧೈರ್ಯಶಾಲಿ ಕಾರ್ಯದಲ್ಲಿ ತಮ್ಮದೇ ಆದ ಪಾತ್ರವನ್ನು ನಿರ್ವಹಿಸಿದರು. ರಾಜಗುರು ವಿವಿದ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಗತ್ ಸಿಂಗ್ ಮತ್ತು ಸುಖದೇವ್ ಥಾಪರ್ ಅವರೊಂದಿಗಿದ್ದರು. ಲಾಲಾ ಲಜಪತ್ ರಾಯ್ ಅವರನ್ನು ಪೋಲೀಸರು ಥಳಿಸಿದ್ದರ ವಿರುದ್ಧ ಸೇಡು ತೀರಿಸಿಕೊಳ್ಳುವುದು ಇವರ ಉದ್ದೇಶವಾಗಿತ್ತು. ಸೈಮನ್ ಆಯೋಗವನ್ನು ಪ್ರತಿಭಟಿಸಿ ಮೆರವಣಿಗೆ ನಡೆಯುತ್ತಿತ್ತು.

ಲಾಹೋರ್‌ನಲ್ಲಿ ಬ್ರಿಟಿಷ್ ಪೋಲೀಸ್ ಅಧಿಕಾರಿ, ಜೆ.ಪಿ "ಜಾನ್" ಸ್ಯಾಂಡರ್ಸ್ ಹತ್ಯೆಯಲ್ಲಿ ಈ ಮೂವರು ಭಾಗವಹಿಸಿದರು. ಈ ಮೂಲಕ ಬ್ರಿಟಿಷರ್ ವಿರುದ್ಧ ಸೇಡು ತೀರಿಸಿಕೊಂಡರು. ಇವರನ್ನು ವಿಚಾರಣೆ ಮಾಡಿದ ನ್ಯಾಯಾಲಯವು ಶಿಕ್ಷೆಯನ್ನು ಖಚಿತಪಡಿಸಿತು. ಇವರ ಹೋರಾಟದ ಬರ್ಭತೆಯನ್ನು ಸಹಿಸದ ಆಂಗ್ಲರು ಇವರ ಬದುಕಿಗೆ ಅಂತ್ಯ ಹಾಡಲು ನಿರ್ಧರಿಸಿದರು. ಅಂದು ಮಾರ್ಚ್ 23, 1931, ರಂದು ಇಪ್ಪತ್ಮೂರು ವರುಷದ ಹದಿ ಹರೆಯದ ಶಿವರಾಮ್ ರಾಜಗುರು ಇವರನ್ನು ಭಗತ್ ಸಿಂಗ್ ಮತ್ತು ಸುಖದೇವ್





ಲತಾ ಕೆ.ಎಸ್.ಹೆಗಡೆ
ಲೇಖಕಿ,
ಬೆಂಗಳೂರು

Scan For Digital Colourful
HAMPI TIMES E-paper

ಅವರೊಂದಿಗೆ ಬ್ರಿಟಿಷ್ ಸರ್ಕಾರವು ಗಲ್ಲಿಗೇರಿಸುವ ಸಿದ್ಧತೆ ಮಾಡಿಕೊಂಡಿತು. ಗಲ್ಲಿಗೇರಿಸುವ ದಿನ ಸಹ ಈ ಮೂವರು ದುಃಖಿಸದೇ, ಖುಷಿಯಿಂದಿದ್ದರು. ಗಲ್ಲು ಸ್ಥಳದ ಪ್ಲಾಟ್ಫಾರಂ ಮೇಲೆ ನಿಂತು ಹಗ್ಗಕ್ಕೆ ಮುತ್ತಿಕ್ಕುತ್ತಾ "ಇಂಕ್ವಿಲಾಬ್ ಜಿಂದಾಬಾದ್" ಘೋಷಣೆ ಮಾಡುತ್ತಾ ಭಗತ್ ಸಿಂಗ್, ಸುಖದೇವ್ ಮತ್ತು ರಾಜಗುರು ಕುಣಿಕೆ ಬಿಗಿದುಕೊಂಡರು. ಅಂದು ಆ ಸೆರೆಮನೆಯಲ್ಲಿ ಸ್ಮಶಾನಮೌನ ಆವರಿಸಿತ್ತು, ಆ ಜೈಲಿನಲ್ಲಿದ್ದ ಯಾರೊಬ್ಬರೂ ಆಹಾರ ಮುಟ್ಟಲಿಲ್ಲ. ಇವರನ್ನು ಗಲ್ಲಿಗೇರಿಸಿದ ವಿಷಯ ತಿಳಿಯದ ಇವರ ಸಂಬಂಧಿಕರು ಭೇಟಿಯಾಗಲು ಬಂದಾಗ ವಿಷಯ ತಿಳಿದು ಗದ್ಗದಿತರಾದರು. ಸಟ್ಲೆಜ್ ನದಿ ತೀರದಲ್ಲಿ ಕ್ರಾಂತಿಕಾರಿಗಳ ದೇಹವನ್ನು ಬ್ರಿಟಿಷರು ರಹಸ್ಯವಾಗಿ ಸುಡುತ್ತಿರುವ ವಿಷಯ ತಿಳಿದು, ಸಾವಿರಾರು ಸಂಖ್ಯೆಯಲ್ಲಿ ಜನ ಸೇರಿದರು. ಅಲ್ಲಿ ದೊರೆತದ್ದು ಅರೆಬರೆ ಸುಟ್ಟ ಕ್ರಾಂತಿಕಾರಿಗಳ ದೇಹದ ಬೂದಿಯಷ್ಟೆ. ಬ್ರಿಟಿಷರು ಈ ತ್ರಿವಳಿ ಕ್ರಾಂತಿಕಾರಿಗಳನ್ನು ಕೊಂದದ್ದು, ಮುಂದೆ ಅವರಿಗೇಯೇ ನಷ್ಟವಾಯಿತು. ಸಾಮ್ರಾಜ್ಯಶಾಹಿ ಭೂಪಟಕ್ಕೆ ತಾವೇ ಈ ತ್ರಿವಳಿ ಕ್ರಾಂತಿ ಕಾರಿಗಳನ್ನು ನೇಣಿಗೆ ಹಾಕುವುದರ ಮೂಲಕ ತಮ್ಮ ಕನಸಿಗೆ ಚೂರಿಯಿಂದ ತಿವಿದು ಕೊಂಡಂತಾಯಿತು.

ರಾಜಗುರು ಜನಿಸಿದ ಪೂರ್ವಜರ ಮನೆ ಪುಣೆ ನಾಸಿಕ್ ರಸ್ತೆಯಲ್ಲಿ ಭೀಮಾ ನದಿಯ ದಡದಲ್ಲಿದೆ. ಸುಮಾರು 2,788 ಚದರ ಮೀಟರ್ ಭೂಮಿಯಲ್ಲಿ ಹರಡಿರುವ ಈ ಮನೆಯನ್ನು ಶಿವರಾಮ ರಾಜಗುರು ಅವರ ಸ್ಮಾರಕವಾಗಿ ನಿರ್ವಹಿಸಲಾಗುತ್ತಿದೆ. ಸ್ಥಳೀಯ ಸಂಸ್ಥೆ, ಹುತಾತ್ಮ ರಾಜಗುರು ಸ್ಮಾರಕ ಸಮಿತಿ (ಊಖಖ), 2004 ರಿಂದ ಗಣರಾಜ್ಯೋತ್ಸವದಂದು ಇಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದರ ಮೂಲಕ ಅವರಿಗೆ ಭಾವಪೂರ್ಣ ನಮನ ಸಲ್ಲಿಸುತ್ತಿದೆ. ಶಿವರಾಮ ರಾಜಗುರು ಇವರ ಸೇವೆಯನ್ನು ಸ್ಮರಿಸಿ 2013 ರಲ್ಲಿ ಭಾರತದ ಅಂಚೆ ಚೀಟಿಯನ್ನು ಇವರ ಹೆಸರಿನಲ್ಲಿ ಬಿಡುಗಡೆ ಮಾಡಲಾಗಿದೆ. ಜನ್ಮಸ್ಥಳವಾದ ಖೇಡ್ ಪಟ್ಟಣವನ್ನು ಗೌರವಾರ್ಥಕವಾಗಿ ರಾಜಗುರುನಗರ ಎಂದು ಮರುನಾಮಕರಣ ಮಾಡಲಾಗುದೆ. ರಾಜಗುರುನಗರವು ಮಹಾರಾಷ್ಟ್ರ ರಾಜ್ಯದ ಪುಣೆ ಜಿಲ್ಲೆಯ ಖೇಡ್ ತೆಹಸಿಲ್‌ನಲ್ಲಿರುವ ಒಂದು ಜನಗಣತಿ ಪಟ್ಟಣವಾಗಿದೆ.

ರಾಜಗುರು ಅವರನ್ನು ಸ್ಮರಿಸುವ ಶಹೀದ್ ರಾಜ್‌ಗುರು ಕಾಲೇಜ್ ಆಫ್ ಅಪ್ಲೈಡ್ ಸೈನ್ಸಸ್ ಫಾರ್ ವುಮೆನ್ ದೆಹಲಿಯ ವಸುಂಧರಾ ಎನ್‌ಕ್ಲೇವ್‌ನಲ್ಲಿದೆ ಮತ್ತು ಇದು ದೆಹಲಿ ವಿಶ್ವವಿದ್ಯಾಲಯದ ಒಂದು ಘಟಕ ಕಾಲೇಜಾಗಿದೆ.

ಇಷ್ಟೆಲ್ಲಾ ಸಾಧನೆ ಮಾಡಿದ ಸ್ವಾತಂತ್ರ್ಯ ಹೋರಾಟಗಾರರ ಹೆಸರು ಎಷ್ಟು ಜನಕ್ಕೆ ತಿಳಿದಿದೆ. ನಮ್ಮ ಶಾಲಾ ಪಠ್ಯ ಪುಸ್ತಕಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ಜನ ಸ್ವಾತಂತ್ರ್ಯ ಹೋರಾಟಗಾರರ ಹೆಸರು ಮಾತ್ರ ಓದಿದ ನೆನಪುಗಳು. ನಾವುಗಳು ಸ್ವಾತಂತ್ರ್ಯ ಸಂಗ್ರಾಮದ ಹಿಂದಿನ ಕೆಚ್ಚದೆಯ ಕಲಿಗಳ ಹೋರಾಟ, ಜೀವನಗಾಥೆ ಮತ್ತು ತಾಯಿ ಭಾರತಾಂಬೆಯನ್ನು ಬಂಧ ಮುಕ್ತಗೊಳಿಸಲು ಅವರು ನೀಡಿದ ಜೀವ ಬಲಿದಾನಗಳ ಬಗ್ಗೆ ಓದಲೇ ಇಲ್ಲ ಎನ್ನುವುದಕ್ಕಿಂತ ಈ ವಿಷಯಗಳನ್ನು ನಮ್ಮ ಪಠ್ಯ ಪುಸ್ತಕಗಳಲ್ಲಿ ಏಕೆ ಸೇರಿಸಲಿಲ್ಲ ಎನ್ನುವ ಪ್ರಶ್ನೆ ಸದಾ ಕಾಡುತ್ತದೆ. ವಿದೇಶಿಯರ ಆಕ್ರಮಣ, ಭಾರತದ ಸಂಪತ್ತಿನ ಲೂಟಿ ಇವುಗಳ ಬಗ್ಗೆ ಮಾಹಿತಿಯಿರುವ ಪಠ್ಯವನ್ನು ಓದಿದಾಗ ನಮ್ಮ ದೇಶದಲ್ಲಿ ಬೆರಳೆಣಿಕೆಯ ವಿದೇಶಿ ಲೂಟಿಕೋರರನ್ನು ಎದುರಿಸುವ ತಾಕತ್ತು ಇರಲಿಲ್ಲವೇ ಅಥವಾ ಅವರೊಂದಿಗೆ ಸೇರಿ ನಮ್ಮವರ ವಿರುದ್ಧವೇ ಕತ್ತಿ ಮಸೆಯುವ ಹುನ್ನಾರವಿತ್ತೇ? ಹೀಗೆ ಕಾಡುವ ಸಾವಿರಾರು ಪ್ರಶ್ನೆಗಳು ನಮ್ಮ ನಿಮ್ಮಲ್ಲೂ ಉದ್ಭವಿಸಬಹುದು. ಪ್ರಶ್ನೆಗಳಿಗೆ ಅಲ್ಪವಿರಾಮ ನೀಡಿ, ನಮ್ಮ ದೇಶದ ವೀರ ಕ್ರಾಂತಿಕಾರಿ ಶಿವರಾಮ್ ರಾಜಗುರು ಅವರಿಗೆ ಅವರ ಜನ್ಮದಿನದಂದು ಅಭಿಮಾನದ ನಮನ ಸಲ್ಲಿಸೋಣ. ಮತ್ತೆ ಹುಟ್ಟಿ ಬನ್ನಿ ರಾಜಗುರು, ಇಂದು ಹಿಂದಿಗಿಂತ ನಿಮ್ಮಂತಹ ಕೆಚ್ಚೆದೆಯ ಕಲಿಗಳ ಅವಶ್ಯಕತೆ ಇದೆಯೆಂದು ತಾಯಿ ಭಾರತಾಂಬೆಯ ಮಕ್ಕಳು ಕೂಗಿ ಕರೆಯುತ್ತಿದ್ದಾರೆ. ಜೈ ಹಿಂದ್... ವಂದೇ ಮಾತರಂ

# ಮಳೆಯಿಂದಾದ ಹಾನಿಗೆ ತ್ವರಿತ ಪರಿಹಾರ ಒದಗಿಸಿ

## ಎಡಿಸಿ ಮಹಮ್ಮದ್ ಝುಬೇರ್ ಸೂಚನೆ | ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಹೆಚ್ಚಿನ ಮಳೆಯಿಂದ ವಿವಿಧೆಡೆ ಸಂಭಾವ್ಯ ಹಾನಿಯಾಗಿದ್ದು, ತ್ವರಿತವಾಗಿ ಪರಿಹಾರ ಒದಗಿಸಲು ಅಧಿಕಾರಿಗಳು ಕ್ರಮವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಅವರು ತಿಳಿಸಿದರು.

ಬುಧವಾರದ, ನೂತನ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಮಳೆಹಾನಿ ಸಂಬಂಧಿಸಿದಂತೆ, ಎಲ್ಲಾ ತಾಲ್ಲೂಕು ತಹಶೀಲ್ದಾರರೊಂದಿಗೆ ಏರ್ಪಡಿಸಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಮಿತಿ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಅತಿವೃಷ್ಠಿಯಿಂದ ಸಂಭವಿಸುವ ಸಾರ್ವಜನಿಕ ಆಸ್ತಿ ಹಾನಿ, ಮಾನವ, ಜಾನುವಾರು ಜೀವಹಾನಿ, ಬೆಳೆ ಹಾನಿ, ಮನೆಗಳ ಹಾನಿ ಬಗ್ಗೆ ಗ್ರಾಮಲೆಕ್ಕಿಗರಿಂದ ವರದಿ ಪಡೆದು, ತಾಲ್ಲೂಕುವಾರು ಕ್ರೋಢೀಕರಿಸಿ ನಿಗದಿತ ನಮೂನೆಯಲ್ಲಿ ಈ ಕಚೇರಿಗೆ ತಪ್ಪದೇ ವರದಿ ಸಲ್ಲಿಸಬಹುದು ಎಂದು ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಕಳೆದ 48 ಗಂಟೆಗಳಲ್ಲಿ 57 ಮನೆಗಳು ಭಾಗಶಃ ಮತ್ತು 4 ಗುಡಿಸಲು ಮನೆಗಳು ಹಾನಿಯಾಗಿವೆ.

ಮಳೆಗಾಲದಲ್ಲಿ ಕಚ್ಚಾ ಮನೆಗಳು ಬೀಳುವುದು, ಜೀವ ಹಾನಿಯಾಗುತ್ತಿರುವುದು ಕಂಡುಬಂದಾಗ



ಆಯಾ ತಹಸಿಲ್ದಾರ್ ಮತ್ತು ಗ್ರಾಮಸಹಾಯಕರು ಕೂಡಲೇ ಸ್ಥಳಕ್ಕೆ ಭೇಟಿ ನೀಡಬೇಕು. ಅವರಿಗೆ ನಿಯಮಾನುಸಾರ ನೀಡಲಾಗುವ ಪರಿಹಾರ ವಿತರಣೆಯಲ್ಲಿ ವಿಳಂಬವಾಗಬಾರದು ಎಂದರು.

ಮಳೆಗಾಲದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಉಂಟಾಗಬಹುದಾದ ನ್ಯೂನತಾ ಅಂಶಗಳನ್ನು ಗಮನದಲ್ಲಿರಿಸಿ ವಿದ್ಯುತ್ ಮೂಲ ಸೌಕರ್ಯಗಳನ್ನು ಬಲಪಡಿಸಬೇಕು. ಯಾವುದೇ ವಿದ್ಯುತ್‌ನಿಂದ ಹಾನಿ ಅಥವಾ ವಿದ್ಯುತ್ ಸರಬರಾಜು ಕಡಿತ ಉಂಟಾದಲ್ಲಿ ತ್ವರಿತವಾಗಿ ಪುನಃ ಸ್ಥಾಪಿಸಲು ಕ್ರಮವಹಿಸಬೇಕು ಎಂದು ಜೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಗ್ರಾ.ಪಂ ವಾರು ಕುಡಿಯಲು ಯೋಗ್ಯವಾದ ನೀರನ್ನೇ ಸರಬರಾಜು ಮಾಡಬೇಕು. ಈ ಕುರಿತು ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನುಕೈಗೊಳ್ಳಬೇಕು ಎಂದು ಪಂಚಾಯತ್ ರಾಜ್ ತಾಂತ್ರಿಕ ಇಲಾಖೆ, ಮತ್ತು ಸಣ್ಣ ನೀರಾವರಿ ಇಲಾಖಾಧಿಕಾರಿಗಳಿಗೆ ತಿಳಿಸಿದರು.

ಕಂಪ್ಲಿ ಮತ್ತು ಸಿರುಗುಪ್ಪ ಭಾಗದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಜಾನುವಾರುಗಳ ಸುರಕ್ಷಿತ ಆಶ್ರಯ ತಾಣಗಳನ್ನು ಗುರುತಿಸಬೇಕು. ಜಾನುವಾರುಗಳಿಗೆ ಅವಶ್ಯ ಮೇವನ್ನು ದಾಸ್ತಾನು ಮಾಡಬೇಕು ಎಂದು ಪಶುಸಂಗೋಪನಾ ಇಲಾಖಾ ಅಧಿಕಾರಿಗೆ ತಿಳಿಸಿದರು.

ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪಡೆ, ತರಬೇತಿ ಪಡೆದ ಸಮುದಾಯ ಮಟ್ಟದ ಸ್ವಯಂ ಸೇವಕರನ್ನು ಜಾಗೃತಿಗೊಳಿಸಿ ಸನ್ನದ್ಧ ಸ್ಥಿತಿಯಲ್ಲಿಡುವುದು ಮತ್ತು ಇಲಾಖೆಯಲ್ಲಿ ಲಭ್ಯವಿರುವ ರಕ್ಷಣಾ ಸಲಕರಣೆ ಮಾಹಿತಿ ಕ್ರೂಢೀಕರಿಸಿಟ್ಟುಕೊಳ್ಳಬೇಕು ಹಾಗೂ ಎಲ್ಲಾ ಸಲಕರಣೆಗಳನ್ನು ಸುಸ್ಥಿತಿಯಲ್ಲಿರುವಂತೆ ಕ್ರಮ ವಹಿಸಬೇಕು ಎಂದು ಅಗ್ನಿ ಶಾಮಕ ಮತ್ತು ಗೃಹ ರಕ್ಷಕದಳ ಇಲಾಖೆಗೆ ತಿಳಿಸಿದರು.

ತುರ್ತು ಸಂದರ್ಭಗಳಲ್ಲಿ ಇತರೆ ಎಲ್ಲಾ ಇಲಾಖೆಗಳನ್ನು ಒಳಗೊಂಡಂತೆ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳು ಸನ್ನದ್ಧರಾಗಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು. ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಜಂಟಿ ಕೃಷಿ ನಿರ್ದೇಶಕ ಡಾ. ಕೆ.ಸೋಮಸುಂದರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.

# ಮಹಿಳಾ ಅಭಿವೃದ್ಧಿ ನಿಗಮ; ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಮಹಿಳಾ ಅಭಿವೃದ್ಧಿ ನಿಗಮ ವತಿಯಿಂದ ಪ್ರಸ್ತಕ ಸಾಲಿಗೆ ವಿವಿಧ ಯೋಜನೆಗಳಡಿ ಸಹಾಯಧನಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ. ಅರ್ಜಿ ಸಲ್ಲಿಸಲು ಸೆ.21 ಕೊನೆಯ ದಿನವಾಗಿದೆ.

**ಯೋಜನೆಗಳು:**

**ಉದ್ಯೋಗಿನಿ ಯೋಜನೆ:** ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕ್‌ಗಳ ಮೂಲಕ ಸಾಲ ಮತ್ತು ನಿಗಮದ ಮೂಲಕ ಸಹಾಯಧನ ನೀಡಲಾತ್ತದೆ. ವಯೋಮಿತಿ 18 ರಿಂದ 55 ವರ್ಷ ಒಳಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಘಟಕ ವೆಚ್ಚವು ಕನಿಷ್ಟ ರೂ.1 ಲಕ್ಷದಿಂದ ಗರಿಷ್ಟ ರೂ.3 ಲಕ್ಷ (ಸಹಾಯಧನ ಶೇ.50) ಮತ್ತು ಸಾಮಾನ್ಯ ವರ್ಗದವರಿಗೆ ಘಟಕ ವೆಚ್ಚ ಗರಿಷ್ಟ ರೂ.3 ಲಕ್ಷ (ಸಹಾಯಧನ ಶೇ.30 ರಷ್ಟು) ನೀಡಲಾಗುವುದು.

**ಚೇತನ ಯೋಜನೆ:** ದಮನಿತ ಮಹಿಳೆಯರಿಗೆ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ರೂ.30 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ.

**ಧನಶ್ರೀ ಯೋಜನೆ:** ಹೆಚ್‌ಐವಿ ಸೋಂಕಿತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ರೂ.30 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ.

**ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ:** ಲಿಂಗತ್ವ ಅಲ್ಪಸಂಖ್ಯಾತ ಫಲಾನುಭವಿಗೆ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ರೂ.30 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ.

**ಮಾಜಿ ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ:** 1993–94 ಮತ್ತು 2007–08 ರ ಸಮೀಕ್ಷೆಯಲ್ಲಿ ಗುರುತಿಸಿರುವ ಮಾಜಿ ದೇವದಾಸಿ ಮಹಿಳೆಯರಿಗೆ ಆದಾಯೋತ್ಪನ್ನ ಚಟುವಟಿಕೆ ಕೈಗೊಳ್ಳಲು ರೂ.30 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ.

**ಸೂಚನೆ:** ಅರ್ಜಿದಾರರು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಿರಬೇಕು. ಉದ್ಯೋಗಿನಿ ಯೋಜನೆಯ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಬಳಕೆಯಾಗದ ಅನುದಾನದಡಿ ಸೌಲಭ್ಯ ಪಡೆಯಲು ಇಚ್ಚಿಸುವ ಫಲಾಪೇಕ್ಷಿಗಳು, ಅರ್ಜಿದಾರರು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಆನ್‌ಲೈನ್ ಸೇವಾಸಿಂಧು ಪೋರ್ಟಲ್ https://sevasindhu.karnataka.gov.in ಗೆ ಭೇಟಿ ನೀಡಬಹುದು. ಬಾಪೂಜಿ ಸೇವಾ ಕೇಂದ್ರ, ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು.

ಸರ್ಕಾರದ ವಿವೇಚನಾ ಕೋಟಾ ಮತ್ತು ನಿಗಮದ ವಿವೇಚನಾ ಕೋಟಾದಡಿ ಸೌಲಭ್ಯ ಪಡೆಯಲು ಇಚ್ಚಿಸುವ ಫಲಾಪೇಕ್ಷಿಗಳು ಸಚಿವರು, ಶಾಸಕರು, ನಿಗಮದ ಅಧ್ಯಕ್ಷರ ಶಿಫಾರಸ್ಸು ಪತ್ರ ಪಡೆದು ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ಈ ಹಿಂದೆ ಮೇಲ್ಕಂಡ ಯೋಜನೆಗಳಡಿ ಸೌಲಭ್ಯ ಪಡೆದ ಫಲಾನುಭವಿಗಳು ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. 2023–24ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದೇ ಇರುವವರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಎಸ್‌ಪಿ ವೃತ್ತದ ಮಹಿಳಾ ಪೊಲೀಸ್ ಠಾಣೆ ಪಕ್ಕದ ಸ್ತ್ರೀಸೇವಾ ನಿಕೇತನ ಆವರಣದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಹಾಗೂ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಜಿಲ್ಲಾ ಅಭಿವೃದ್ಧಿ ನಿರೀಕ್ಷಕರ ಕಚೇರಿಗೆ ಸಂಪರ್ಕಿಸಿ.

# ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಯೋಜನೆಯಡಿ ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಯಡಿ ಸಾಲ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಗಮವು 2024–25ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಅಲ್ಪಸಂಖ್ಯಾತ ಸಮುದಾಯದ ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ಸಾಲ ಮತ್ತು ಸಹಾಯಧನ ಯೋಜನೆ, ಸಿಖ್ಖಲಿಗಾರ ಸಮುದಾಯದ ಜನರ ಆರ್ಥಿಕ ಸಬಲೀಕರಣಕ್ಕೆ ಪ್ರೋತ್ಸಾಹ ಯೋಜನೆ ಮತ್ತು ರೇಷ್ಮಾ ನೂಲು ಬಿಚ್ಚಾಣಿಕೆ ಉದ್ಯಮಕ್ಕೆ ಪ್ರೋತ್ಸಾಹ ಯೋಜನೆಯಡಿಯಲ್ಲಿ ಸಾಲ ಸೌಲಭ್ಯ ಪಡೆಯಲು ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರೈಸ್ತರು, ಜೈನರು, ಬೌದ್ಧ ಧರ್ಮಿಯರು, ಸಿಖ್ಖರು ಮತ್ತು ಪಾರ್ಸಿ ಜನಾಂಗದ ಫಲಾನುಭವಿಗಳು ಇಲಾಖಾ ವೆಬ್‌ಸೈಟ್ kmdconline.karnataka.gov.in ನಲ್ಲಿ ಆಗಸ್ಟ್ 31ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಈ ಯೋಜನೆಗಳಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರನ್ನು ಅಥವಾ ದೂರವಾಣಿ ಸಂಖ್ಯೆ: 08539–225008ಗೆ ಸಂಪರ್ಕಿಸಿ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಶ್ರಾವಣ । ಸಂವತ್ಸರ: ಕ್ರೋಧಿ

**24–08–2024 – ಶನಿವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅಶ್ವಿನಿ |
| ಯೋಗ | : ವೃದ್ಧಿ |
| ಕರಣ | : ತೈತುಲ |
| ಸೂರ್ಯೋದಯ | : 06:07:40 |
| ಸೂರ್ಯಾಸ್ತ | : 18:50:21 |
| ರಾಹು ಕಾಲ | : 09:18–10:54 |
| ಯಮಘಂಡ ಕಾಲ | : 14:04–14:40 |
| ಗುಳಿಕ ಕಾಲ | : 06:08–07:43 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 23–08–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.01 ಅಡಿ |
| ಒಳ ಹರಿವು | 37489 ಕ್ಯೂಸೆಕ್ |
| ಹೊರ ಹರಿವು | 9488 ಕ್ಯೂಸೆಕ್ |
| ಇಂದಿನ ಸಾಮರ್ಥ್ಯ | 83.249 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1626.83 ಅಡಿ |
| ಒಳ ಹರಿವು | 1606 ಕ್ಯೂಸೆಕ್ |
| ಹೊರ ಹರಿವು | 10244 ಕ್ಯೂಸೆಕ್ |
| ಸಾಮರ್ಥ್ಯ | 82.230 ಟಿಎಂಸಿ |

# ವಿದ್ಯಾರ್ಥಿ ಸಮೂಹವು ಬಾಹ್ಯಾಕಾಶ ಕ್ಷೇತ್ರದ ಆಸಕ್ತಿ ಬೆಳೆಸಿಕೊಳ್ಳಬೇಕು

### ಸಿಇಒ ರಾಹುಲ್ ಶರಣಪ್ಪ ಸಂಕನೂರ ಹೇಳಿಕೆ । ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ



**■ ಹಂಪಿ ಟೈಮ್ಸ್ ಬಳ್ಳಾರಿ**

ವಿದ್ಯಾರ್ಥಿ ಸಮೂಹವು ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದರ ಮೂಲಕ ದೇಶದ ತಾಂತ್ರಿಕ ಸಾಮರ್ಥ್ಯಕ್ಕೆ ಕೊಡುಗೆ ನೀಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಹೇಳಿದರು.

ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಭಾರತೀಯ ವಿಜ್ಞಾನ ಸಂಸ್ಥೆ ಹಾಗೂ ಜಿಲ್ಲಾ ಪಂಚಾಯತ್ ಇವರ ಸಹಯೋಗದೊಂದಿಗೆ ನಗರದ ಕೋಟೆ ಪ್ರದೇಶದ ಜಿಪಂ ನಜೀರ್ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ರಾಷ್ಟ್ರೀಯ ಬಾಹ್ಯಾಕಾಶ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬ್ಯಾಹಾಕಾಶ ಅಧ್ಯಯನ ಕುರಿತಂತೆ ಯಾವುದೇ ಒಂದು ಯೋಜನೆಯ ಯಶಸ್ಸಿನ ಹಿಂದೆ ಹಲವಾರು ವಿಜ್ಞಾನಿಗಳ ಪೂರ್ವ ತಯಾರಿ, ಅವರ ಕಠಿಣ ಪರಿಶ್ರಮ ಅಡಗಿದೆ. ಅವರ ಬದುಕು ವಿಶಿಷ್ಟವಾದುದು ಎಂದು ಬಣ್ಣಿಸಿದರು.

ಇಂದಿನ ಯುವಪೀಳಿಗೆಯು ಸಾಧನೆಯ ಗುರಿ ಇಟ್ಟುಕೊಂಡು ಯಶಸ್ಸಿನ ಪಥದಲ್ಲಿ ಸಾಗಬೇಕು ಎಂದು ವಿದ್ಯಾರ್ಥಿ ಸಮೂಹಕ್ಕೆ ಕಿವಿಮಾತು ಹೇಳಿದರು.

ಇಸ್ರೋ ವಿಜ್ಞಾನಿ ವಿ.ಚಂದ್ರಬಾಬು ಅವರು ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿ, ರಾಷ್ಟ್ರೀಯ ಬಾಹ್ಯಾಕಾಶ ದಿನವು ಸಾಧನೆಗಳ ಸ್ಮರಣೆ ಮತ್ತು ಭವಿಷ್ಯದ ಅನ್ವೇಷಣೆಗಳ ಮಹತ್ವವನ್ನು ಸಾರಲು ಮುಖ್ಯವಾಗಿದೆ ಎಂದು ಅವರು ಹೇಳಿದರು.

ಚಂದ್ರಯಾನ–3ರ ಅವಿಸ್ಮರಣೀಯ ಸಾಧನೆಯ ಮೂಲಕ ಭಾರತ ಚಂದ್ರನ ಅಂಗಳದಲ್ಲಿ ಇಳಿದ ನಾಲ್ಕನೇ ರಾಷ್ಟ್ರ ಎಂಬ ಗೌರವ ಸಂಪಾದಿಸಿದೆ. ಇದರ ಜೊತೆಗೆ, ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದ ಮೊದಲ ರಾಷ್ಟ್ರ ಎಂಬ ಹೆಗ್ಗಳಿಕೆಗೂ ಪಾತ್ರವಾಯಿತು. ಆ ಮೂಲಕ ಬಾಹ್ಯಾಕಾಶ ಅನ್ವೇಷಣೆಯಲ್ಲಿ ಭಾರತ ತನ್ನದೇ ಆದ ಛಾಪು ಮೂಡಿಸಿತು. ವಿಕ್ರಮ್ ಲ್ಯಾಂಡರ್‌ನ ಯಶಸ್ವಿ ಸಾಫ್ಟ್ ಲ್ಯಾಂಡಿಂಗ್ ಬಳಿಕ, ಪ್ರಗ್ಯಾನ್ ರೋವರ್ ಯಶಸ್ವಿಯಾಗಿ ಕಾರ್ಯಾಚರಿಸಿ, ಚಂದ್ರಯಾನ–3 ಯೋಜನೆಯ ಯಶಸ್ಸಿಗೆ ಇನ್ನೊಂದು ಗರಿ ಮೂಡಿಸಿತು ಎಂದರು.

2023ರ ಆ.23ರಂದು ಭಾರತದ ಪ್ರಮುಖ ಬಾಹ್ಯಾಕಾಶ ಯೋಜನೆಯಾದ 'ಚಂದ್ರಯಾನ–3' ಚಂದ್ರನ ದಕ್ಷಿಣ ಧ್ರುವ ತಲುಪುವ ಮೂಲಕ, ಈ ಸಾಧನೆ ಮಾಡಿದ ಮೊದಲ ದೇಶವೆಂಬ ಖ್ಯಾತಿಗೆ ಭಾರತ ಪಾತ್ರವಾಗಿತ್ತು. ಚಂದ್ರಯಾನದ ಯಶಸ್ಸಿನ ನೆನಪಿಗಾಗಿ ಆ.23ರನ್ನು 'ರಾಷ್ಟ್ರೀಯ ಬಾಹ್ಯಾಕಾಶ ದಿನ'ವನ್ನಾಗಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಭಾರತದ ಬಾಹ್ಯಾಕಾಶ ಅನ್ವೇಷಣೆಗಳು ಕೇವಲ ಅಸಾಧಾರಣ ವೈಜ್ಞಾನಿಕ ಸಾಧನೆಗಳಿಗೆ ಸೀಮಿತವಾಗಿರದೆ, ಭಾರತೀಯರ ದೈನಂದಿನ ಜೀವನದ ಮೇಲೂ ಧನಾತ್ಮಕ ಬದಲಾವಣೆ ಬೀರುತ್ತದೆ. ತಾಂತ್ರಿಕ ಅಭಿವೃದ್ಧಿಗಳು ಮತ್ತು ಬಾಹ್ಯಾಕಾಶ ಅನ್ವೇಷಣೆಗಳಲ್ಲಿನ ಯಶಸ್ಸು ಸಾಧಿಸಲು ಹಲವಾರು ಸಂಶೋಧನೆ ಕೈಗೊಳ್ಳಲು ಯತ್ನ ನಡೆಸುತ್ತಿದೆ ಎಂದು ಅವರು ವಿಶ್ಲೇಷಿಸಿದರು.

ಸಾರ್ವಜನಿಕರಲ್ಲಿ ಬಾಹ್ಯಾಕಾಶ ಅನ್ವೇಷಣೆಗಳಿಂದ ಲಭಿಸುವ ಹತ್ತು ಹಲವು ಪ್ರಯೋಜನಗಳ ಕುರಿತು ಅರಿವು ಮೂಡಿಸುವುದೂ ಇದರ ಗುರಿಯಾಗಿದ್ದು, ಬಾಹ್ಯಾಕಾಶ ದಿನಾಚರಣೆ ಜನರಲ್ಲಿ ರಾಷ್ಟ್ರೀಯ ಹೆಮ್ಮೆ ಮತ್ತು ಐಕ್ಯತೆ ಮೂಡಿಸಲಿದೆ ಎಂದು ತಮ್ಮ ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಉಪಗ್ರಹ ಮತ್ತು ರಾಕೆಟ್‌ಗಳ ತಯಾರಿಕೆ, ಅವುಗಳ ಕಾರ್ಯಕ್ಷಮತೆ, ವಿವಿಧ ಹಂತಗಳಲ್ಲಿ ಬೆಳೆದು ಬಂದ ಹಾದಿಯ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು ಮತ್ತು ಉಪಗ್ರಹ, ರಾಕೆಟ್‌ಗಳ ಉಡಾವಣೆಯ ಬಗೆಯನ್ನು ಎಳೆ–ಎಳೆಯಾಗಿ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ತೋರಿಸಿಕೊಟ್ಟರು.

ಈ ವೇಳೆ ಜಿಪಂ ಉಪ ಕಾರ್ಯದರ್ಶಿ ಗಿರಿಜಾಶಂಕರ್, ಜಿಪಂ ಮುಖ್ಯಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಎಸ್.ಎಂ., ಯೋಜನಾ ನಿರ್ದೇಶಕ ವಿನೋದ ಕುಮಾರ್, ಎನ್‌ಐಸಿ ಕೇಂದ್ರದ ತಾಂತ್ರಿಕ ನಿರ್ದೇಶಕ ಶಿವಪ್ರಸಾದ್ ವಸ್ತ್ರದ್, ಕಾರ್ಯಕ್ರಮ ಸಂಯೋಜಕ ರಾಮಚಂದ್ರ ರೆಡ್ಡಿ ಜಿ.ಬಿ ಸೇರಿದಂತೆ ವಿವಿಧ ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಆ. 31ಕ್ಕೆ ಪಟ್ಟಣ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ



**■ ಹಂಪಿ ಟೈಮ್ಸ್ ಕೊಟ್ಟೂರು**

ವಿಜಯನಗರ ಜಿಲ್ಲಾಧಿಕಾರಿಗಳು ಕೊಟ್ಟೂರು ಪಟ್ಟಣ ಪಂಚಾಯತಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ಚುನಾವಣೆ ಅಧಿಕಾರಿಯಾಗಿ ಕೊಟ್ಟೂರು ತಹಶಿಲ್ದಾರ ಅವರನ್ನು ನೇಮಿಸಿ ಚುನಾವಣೆ ನಡೆಸಲು ಅದೇಶಿಸಲಾಗಿದೆ.

ಈ ಹಿನ್ನೆಲೆ ಮಾನ್ಯ ಕೊಟ್ಟೂರು ತಹಶಿಲ್ದಾರ ಅಮರೇಶ ಜಿ.ಕೆ ಅವರು ಕೊಟ್ಟೂರು ಪಟ್ಟಣ ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ದಿನ ನಿಗದಿ ಪಡಿಸಿ ಪ್ರಕಟಣೆ ನೀಡಿದ್ದಾರೆ.

ಚುನಾವಣೆ ಆಗಸ್ಟ್ 31 ಶನಿವಾರ ಪಟ್ಟಣ ಪಂಚಾಯಿತಿ ಕಾರ್ಯಾಲಯದಲ್ಲಿ ನಡೆಸಲು ತೀರ್ಮಾನಿಸಿ ಈ ಸಂಬಂಧ ಪಟ್ಟಣ ಪಂಚಾಯಿತಿಯ ಎಲ್ಲಾ ಸದಸ್ಯರಿಗೆ ಚುನಾವಣೆ ನೋಟೀಸ್ ಗಳನ್ನು ನಿಯಮಾನುಸಾರ ಜಾರಿ ಮಾಡಲು ಸೂಚಿಸಿ ಪತ್ರಿಕಾ ಪ್ರಕಟಣೆಗೆ ಮಾಹಿತಿ ನೀಡಿದ್ದಾರೆ.

# ಗ್ರಾಮ ಸಹಾಯಕರಿಗೆ ಮೊಬೈಲ್ ವಿತರಣೆ

**ಮೊದಲ ಪುಟದಿಂದ**

ಫೀಲ್ಡ್ ವರ್ಕ್ ಮಾಡುವ ವಿವಿಧ ಇಲಾಖೆಯ ಸಿಬ್ಬಂದಿಗಳಿಗೆ ಮೊಬೈಲ್ ನೀಡುವುದಾಗಿ ತಿಳಿಸಿದರು. ಗ್ರಾಮ ಸಹಾಯಕರಿಗೆ ಗುಣಮಟ್ಟದ ಉಚಿತ 5ಜಿ.ಜಿ. ಮೊಬೈಲ್‌ಗಳನ್ನು ನೀಡಿದ್ದಕ್ಕಾಗಿ ಎಸ್.ಎಲ್.ಆರ್.ನ ಪಿಆರ್‌ಓ ನವೀನ್ ಹಾಗೂ ಜಿಲ್ಲಾಧಿಕಾರಿಗಳಿಗೆ ಶಾಸಕರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಉಪ ತಹಶೀಲ್ದಾರ್ ಶಿವಕುಮಾರ್ ಗೌಡ, ಗ್ರಾಮ ಆಡಳಿತ ಅಧಿಕಾರಿಗಳ ರಾಜ್ಯಾಧ್ಯಕ್ಷ ಬಿ.ದೊಡ್ಡಬಸಪ್ಪರೆಡ್ಡಿ, ಜಿಲ್ಲಾಧ್ಯಕ್ಷ ಪಕ್ಕೀರಪ್ಪ, ಮರಿಯಮ್ಮನಹಳ್ಳಿ ಕಂದಾಯ ನಿರೀಕ್ಷಕ ಶರೀಪ್ ಸಾಬ್, ಎಸ್.ಎಲ್.ಆರ್.ನ ಕಾನೂನು ಸಲಹೆಗಾರ ಸಿ.ನಿಂಗಪ್ಪ, ಸಿಬ್ಬಂದಿಗಳಾದ ಮಾರುತಿ ಜೋಶಿ ಹಾಗೂ ಮಲ್ಲಿಕಾರ್ಜುನ ಚೈತನ್ಯ ಟ್ರಸ್ಟ್‌ನ ಭೀಮರಾಜ್, ಜೆಡಿಎಸ್‌ಅಧ್ಯಕ್ಷ ವೈ. ಮಲ್ಲಿಕಾರ್ಜುನ, ಮುಖಂಡರಾದ ಕೃಷ್ಣಮೂರ್ತಿ, ಜಿ.ಎಂ.ಸಿದ್ದೇಶ್, ಬ್ಯಾಟಿ ನಾಗರಾಜ, ತಾಲೂಕು ಸೇರಿದಂತೆ ಕೊಟ್ಟೂರು, ಮರಿಯಮ್ಮನಹಳ್ಳಿ ಭಾಗದ ಗ್ರಾಮ ಸಹಾಯಕರು ಪಾಲ್ಗೊಂಡಿದ್ದರು.

# ರೈತ ಉತ್ಪಾದಕರ ಸಂಸ್ಥೆಗಳಿಗೆ ಡಿಜಿಟಲ್ ಮೂಲಕ ಉತ್ತೇಜಿ

### ಡಿಸಿ ನಲಿನ್ ಅತುಲ್ ಸೂಚನೆ । ಜಿಲ್ಲಾ ಮಟ್ಟದ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಮಿತಿ ಸಭೆ



**■ ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯ ರೈತ ಉತ್ಪಾದಕರ ಸಂಸ್ಥೆಗಳಿಗೆ ಡಿಜಿಟಲ್ ಮಾರುಕಟ್ಟೆ ಮೂಲಕ ವ್ಯವಹರಿಸುವಂತೆ ಉತ್ತೇಜಿಸಬೇಕು ಕೊಪ್ಪಳ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ವಿವಿಧ ಯೋಜನೆಗಳಡಿ ರಚಿತವಾದ ರೈತ ಉತ್ಪಾದಕ ಸಂಸ್ಥೆಗಳಿಗೆ 3 ತಿಂಗಳ ಸ್ಯಾಚುರೇ?ನ್ ಡ್ರೈವ್ ಕುರಿತು ಕೃಷಿ ಇಲಾಖೆಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಗಸ್ಟ್ 22ರಂದು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರನ್ನು ಗುರುತಿಸಿ ಸಂಘಟನೆ ಮೂಲಕ ಅಗತ್ಯ ಮಾರುಕಟ್ಟೆ ಸೌಲಭ್ಯ, ಕೃಷಿ ಪರಿಕರಗಳ ಸ್ಥಳೀಯ ಲಭ್ಯತೆ, ಕೃಷಿ ಉತ್ಪನ್ನ ಸಂಸ್ಕರಣೆ, ಬೆಳೆಗಳ ಮೌಲ್ಯ ವರ್ಧನೆ, ಉಪ ಉತ್ಪನ್ನಗಳ ತಯಾರಿಕೆ ಮೂಲಕ ಮತ್ತ?್ಟು ಲಾಭ ತಂದುಕೊಡುವುದು. ಕೃಷಿಕರನ್ನು ಸ್ವಾವಲಂಬಿ ಹಾಗೂ ಆರ್ಥಿಕವಾಗಿ ಸಧೃಡವಾಗಿಸುವ, ಉತ್ಪಾದನೆಯನ್ನು ವೃದ್ಧಿಗೊಳಿಸಿ ರೈತರ ಆದಾಯವನ್ನು ಹೆಚ್ಚಿಸುವ ಮುಖ್ಯ ಉದ್ದೇಶದಿಂದ ವಿವಿಧ ಯೋಜನೆಗಳಡಿ ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಲಾಗಿದೆ. ಜಿಲ್ಲೆಯಲ್ಲಿ ಈಗಾಗಲೇ ರಚಿಸಿರುವ ರೈತ ಉತ್ಪಾದಕರ ಸಂಸ್ಥೆಗಳಿಗೆ ಮಿ?ನ್ ಮಾದರಿಯಲ್ಲಿ (3 ತಿಂಗಳ ಸ್ಯಾಚುರೇಶನ್ ಡ್ರೈವ್) ಶಿಬಿರಗಳನ್ನು ಕೈಗೊಂಡು ಬಿತ್ತನೆ ಬೀಜ, ರಸಗೊಬ್ಬರ, ಪೀಡೆನಾಶಕ, ಕೃಷಿ ಮಾರುಕಟ್ಟೆ ಎಪಿಎಂಸಿ ಮಂಡಿ ಮತ್ತು ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಸಂಘ (ಎಫ್.ಎಸ್.ಎಸ್.ಎ.ಐ) ಪರವಾನಗಿಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ರೈತ ಉತ್ಪಾದಕರ ಸಂಸ್ಥೆಗಳಿಗೆ ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್, ರಾಷ್ಟ್ರೀಯ ಇ–ಮಾರ್ಕೆಟ್ ಪ್ರೈಲಿ ಹಾಗೂ ಇತರೆ ಡಿಜಿಟಲ್ ಮಾರುಕಟ್ಟೆ ವೇದಿಕೆಗಳಡಿ ನೋಂದಾಯಿಸಿ ವ್ಯವಹಾರ ಮಾಡಲು ಪ್ರೇರೇಪಿಸಬೇಕು. ರೈತ ಉತ್ಪಾದಕರ ಸಂಸ್ಥೆಗಳಿಗೆ ವಿವಿಧ ಯೋಜನೆಗಳಡಿ ದೊರಕುವ ಸೌಲಭ್ಯಗಳ ಬಗ್ಗೆ, ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಸಂಪರ್ಕ ಕಲ್ಪಿಸಲು ಅಗತ್ಯ ಮಾಹಿತಿ ನೀಡಬೇಕು. ಅಮೃತ ಯೋಜನೆ ಅಡಿಯಲ್ಲಿ ರಚನೆಯಾಗಿರುವ ರೈತ ಉತ್ಪಾದಕರ ಸಂಸ್ಥೆಗಳಿಗೆ ರಾಜ್ಯ ಸರಕಾರದ ಸಹಾಯ ಧನ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ಹಾಗೂ ಕೇಂದ್ರ ವಲಯ ಯೋಜನೆ ಅಡಿಯಲ್ಲಿ ರಚನೆಯಾಗಿರುವ ಉತ್ಪಾದಕರ ಕಂಪನಿಗಳಿಗೆ ಇರುವ ಸಹಾಯ ಧನದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಕೊಪ್ಪಳ ಜಂಟಿ ಕೃಷಿ ನಿರ್ದೇಶಕರಾದ ಟಿ. ಎಸ್.ರುದ್ರೇಶಪ್ಪ ಅವರು ಮಾತನಾಡಿ, ರೈತ ಉತ್ಪಾದಕರ ಸಂಸ್ಥೆಗಳ ಮೂಲಕ ರೈತರನ್ನು ಸಂಘಟಿಸಿ ಅವರ ಸಾಮರ್ಥ್ಯವನ್ನು ಬಲವರ್ಧನೆಗೊಳಿಸುವ ಮೂಲಕ ಉತ್ಪಾದನಾ ಮತ್ತು ಮಾರುಕಟ್ಟೆ ಬಲಗಳನ್ನು ಅಭಿವೃದ್ಧಿಗೊಳಿಸುವುದು. ರೈತರು ಸಾಮೂಹಿಕವಾಗಿ ಮಾರುಕಟ್ಟೆಗೆ ಅನುಗುಣವಾಗಿ ಬೆಳೆಗಳ ಉತ್ಪಾದನೆ, ಸುಸ್ಥಿರ ಸಂಪನ್ಮೂಲಗಳ ಬಳಕೆ, ಪರಿಕರಗಳ ಮಾರಾಟ, ಮೌಲ್ಯ ವರ್ಧನೆ ಹಾಗೂ ಉತ್ಪನ್ನಗಳ ಮಾರಾಟ ಮಾಡುವ ಗುರಿ ಹೊಂದಲಾಗಿದೆ. ರಾಜ್ಯ ಸರ್ಕಾರವು ಒಟ್ಟು 5 ವ?ರ್ಗಳ ಅವಧಿಯಲ್ಲಿ ಪ್ರತಿ ಹೋಬಳಿ ಮಟ್ಟದಲ್ಲಿ ಕನಿ?ಠ ಒಂದು ರೈತ ಉತ್ಪಾದಕರ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಸುಮಾರು 5 ಲಕ್ಷ ರೈತರನ್ನು ಸಂಘಟಿಸುವ ದೂರದೃಷ್ಟಿ ಹೊಂದಿದೆ. ಪ್ರತಿ ರೈತ ಸದಸ್ಯರಿಂದ ತಲಾ 1000 ದಂತೆ ?ೇರು ಬಂಡವಾಳದ ಮೂಲಕ ಸಂಸ್ಥೆಯ ರಚನೆ, ಕಂಪನಿ ಕಾಯ್ದೆ 2013 ಕಾಯ್ದೆಯಡಿಯಲ್ಲಿ ನೊಂದಣಿ, ಗ್ರ?ರಾಮ ಮಟ್ಟದಲ್ಲಿ 15 ರಿಂದ 20 ಸದಸ್ಯರನ್ನೊಳಗೊಂಡಂತೆ ರೈತರ ಆಸಕ್ತ ಗುಂಪು ರಚಿಸಿ (ಎಫ್‌ಐಜಿ), 20 ರೈತ ಆಸಕ್ತ ಗುಂಪುಗಳನ್ನು ಒಗ್ಗೂಡಿಸಿ 300 ರಿಂದ 500 ರೈತ ಸದಸ್ಯರನ್ನೊಳಗೊಂಡು ಒಂದು ಎಫ್.ಪಿ.ಓ ರಚಿಸಿ, 12 ರಿಂದ 15 ಮಂದಿ ಸದಸ್ಯರನ್ನು ಸಂಸ್ಥೆ ನಿರ್ದೇಶಕರನ್ನಾಗಿ ಚುನಾಯಿಸಿ ಆಡಳಿತ ಮಂಡಳಿ ರಚಿಸಲಾಗುವುದು. ಜಲಾನಯನ ಅಭಿವೃದ್ಧಿ ಇಲಾಖೆ, ನಬಾರ್ಡ್, ತೋಟಗಾರಿಕೆ ಇಲಾಖೆ, ಪಶು ಸಂಗೋಪನೆ ಇಲಾಖೆ, ಮೀನುಗಾರಿಕೆ ಇಲಾಖೆ, ಜೆ.ಎಸ್.ಡಬ್ಲ್ಯೂ ಪೌಂಡೇಶನ್ ಹಾಗೂ ಇತರೆ ಸೇರಿ ಕೊಪ್ಪಳ ಜಿಲ್ಲೆಯಲ್ಲಿ 44 ರೈತ ಉತ್ಪಾದಕರ ಸಂಸ್ಥೆಗಳು ರಚಿತವಾಗಿದ್ದು, ಇದರಲ್ಲಿ ಸಂಖ್ಯೆ 31,658 ರೈತರು ಸದಸ್ಯರಿದ್ದಾರೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಕೊಪ್ಪಳ ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃ?್ಣ ಸಿ ಉಕ್ಕುಂದ, ಪಶು ಇಲಾಖೆ ಉಪನಿರ್ದೇಶಕರಾದ ಡಾ ಪಿ.ಎಂ.ಮಲ್ಲಯ್ಯ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಸುಧಾಕರ ಮಾನೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ತಹಶೀಲ್ದಾರರು ಉಪಸ್ಥಿತರಿದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ** **ಹಿಂದಿ**

### पूरक वाचन

**शनि : सबसे सुंदर ग्रह**

**I. दो - तीन वाक्यों में उत्तर लिखिए ।**

**1) शनि किसका पुत्र है ? "शनै:चर" का अर्थ क्या है ?**

शनि **महाराज सूर्य का पुत्र** है । और "शनै:चर" का अर्थ होता है - **धीमी गति से चलनेवाला ।**

**2)सौर-मंडल का सबसे बडा ग्रह कौन- सा है ? सौर-मंडल में शनि का स्थान क्या है ?**

सौर-मंडल का सबसे बडा ग्रह **बृहस्पति** है।
सौर-मंडल में शनि का स्थान **दूसरा** है ।

**3)सौर-मंडल का सबसे बडा उपग्रह कौन- सा है ? बहुत कम सूर्यताप किस ग्रह पर होता है ?**

सौर-मंडल का सबसे बडा उपग्रह **गैनीमीड** है ।
बहुत कम सूर्यताप **शनि ग्रह** पर होता है ।

**4) शनि एक अत्यंत ठंडा ग्रह है । कैसे ? (2018 )**

शनि ग्रह सूर्य से पृथ्वी की अपेक्षा करीब दस गुना अधिक दूर है , इसलिए बहुत कम सूर्यताप उस ग्रह पर पहुँचता है - पृत्वी का मात्र सौवाँ हिस्सा | इसलिए शनि के वायुमंडल शून्य के नीचे 150 सेंटीग्रेड के आसपास रहता है | इसलिए शनि एक अत्यंत ठंडा ग्रह है |

**5) शनि का निर्माण किस प्रकार हुआ (June - 2024 )**

बृहस्पति की तरह शनि का वायुमंडल भी हाइड्रोजन, हीलियम, मीथेन तथा एमोनिया गैसों से बना है ।

**6) टाइटान के बारे में लिखिए | (April 2024 )**

शनि का सबसे बडा उपग्रह टाइटान सौरमंडल का सर्वाधिक महत्वपूर्ण और दिलचस्प उपग्रह है । टाइटान हमारे चंद्र से भी काफी बडा है । इसका व्यास 5150 किलोमिटर है ।

www.hampitimes.com - Hampi Times Margadarshi

### व्याकरण

**प्रेरणार्थक शब्द**

| क्रिया पद | प्रथम प्रेरणार्थक शब्द | द्वितीय प्रेरणार्थक शब्द |
|---|---|---|
| करना | कराना | करवाना |
| जागना | जगाना | जगवाना |
| जीतना | जिताना | जितवाना |
| देखना | दिखाना | दिखवाना |
| बैठना | बिठाना | बिठवाना |
| पीना | पिलाना | पिलवाना |
| खाना | खिलाना | खिलवाना |
| धोना | धुलाना | धुलवाना |

**वचन**

| एक वचन | बहु वचन | एक वचन | बहु वचन |
|---|---|---|---|
| किताब | किताबे | कौआ | कौए |
| कपडा | कपडें | लिफाफा | लिफाफें |
| कविता | कविताएँ | माता | माताएँ |
| कहानी | कहानियाँ | फल | फल |

**लिंग**

| पुल्लिंग | स्त्रीलिंग | पुल्लिंग | स्त्रीलिंग |
|---|---|---|---|
| लेखक | लेखिका | बैल | गाय |
| पिता | माता | आदमी | औरत |
| भाई | बहन | पुत्र | पुत्री |
| कवि | कवयित्री | बालक | बालिका |
| मोर | मोरनी | छात्र | छात्रा |

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ,** ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055